SRI S R. BOMMAI.—They stand on the same footing. That was a case of protest.

SRI B. BASAVALINGAPPA.—This is complete obstruction of proceedings in the House.

SRI S. R. BOMMAI.—May be. There are a number of instances in all the legislatures where suspensions are there. But, immediately within two or three days the order is revoked. So, the matter may be taken up tommorrow.

SRI B. BASAVALINGAPPA.—I will try to contact the Leader. In case it does not happen, we will take it up on day after tomorrow.

## Karnataka Land Reforms (Amendment) Bill 1978
## Motion to Consider (Debate Contuinued)

MADAM DEPUTY SPEAKER.—Now we will resume discussion on the Land Reforms Bill.

† SRI M. V. RAJASHEKARAN (Uttarahalli).—Madam Deputy Speaker, the other day I was submitting to the House how this Government has failed to have an integrated approach in the implementation of land reforms. In fact I was quoting some examples of some countries where effective implementation of land reforms has been achieved. I know that this Government has done some good work. But that does not mean they have taken into consideration all the relevant matters which go into making this vital legislation a most successful one. This Government always claims that they have marched forward and that they have done so much in giving tenancy rights to the landless and tenants who have been tilling the land for many years. I remember a proverb.

SRI B. BASAVALINGAPPA (Minister for Revenue).—Proprietory rights, not tenancy rights!

SRI M. V. RAJASHEKARAN.—You have not transferred the lands. The Land Reforms should be given the highest consideration and the highest place, and the Hon'ble Minister should have all the law to implement them effectively. I was just trying to quote a proverb: 'In the Kingdom of blinds, one-eyed man is the king'. I agree that the other States in India have not been able to implement the Land Reforms as effectively as Karnataka. That does not mean that Karnataka has very effectively implemented the Land Reforms programme, and has given benefits to the tenants. That is my point. Land Reforms is meant to give social and economic justice to the poor people so that their level of income is increased and so that they are made to earn and live honourably. This is a thing which exactly

the people who conceived about Land Reforms measures thought. This is what has to be done. In this connection, I would like to quote the saying of one of the most distinguished ecnomists in the world Dr. Gunnar Myradaul said:

> "By land reforms we understand a planned legal and institutional reorganisation of the relation between the man and land".

That is what he has said. This Government has just intiated a first step in the direction of giving benefits to the landless and the tenants. That first step is that they have passed the law and intiated certain judicial action with regard to the redistribution of land. Only that much has been done. There are other steps which they have to take. I do not know whether they are contemplating any steps in this direction. To my mind, I do not see any steps are contemplated even in the piece of legislation which has been brought before this House. I fail to read any concrete step in that direction. Madam Deputy Speaker, as I have stated the other day, this Government is interested in againing political advantage by the implementation of this programme. I would like to remind this House about the other follow-up steps that this Government should take viz., (1) to make the tenants as real owner. Why this Government has not taken any step to make the tenant the owner? Even today all the land records stand in the name of the Government. They have not given the right of ownership. I would appeal to the Government, through you, Madam Deputy Speaker, that they should take immediate steps in this direction.

Then comes the other rights. When we talk about Land Reforms, we have to realise that land rights have to be confirmed the land tenure system, and to make that land productive. When the Land Reforms was conceived, we felt that every man in the village would be given the means of production to his hands so that he would be able to earn more. We felt satisfied that more distribution of land would have solve all the problems. It is not like that. They have to take to supply the necessary inputs to make that land productive. What steps this Government has taken in this direction? I do not see that the Government is doing anything in this direction. Again, the very land reforms measure, its implementation and its effective control is in the hands of people who have not been properly taught about this particular piece of legislation. Even the Land Reforms is with the Minister for Revenue. As we know the Minister for Revenue has got so many other works to attend to. Therefore, I would like to plead that this Government should create a separate Directorate for Land Reforms with a high power body. This has been

the practice all over the world. Unfortunately, in our country, we are using this as a political weapon, and we have not given any economic content to that weapon. I request the Government to take effective steps to create a separate Land Reforms Directorate and to have a separate Minister for Land Reforms. In Egypt one of the senior-most members of the Revolutionary Council is in charge of this measure. Likewise in Latin American countries, in Peru and Baluvia, the President has been put in charge of the Land Reforms. He has got a high power body to advice. Therefore, I would plead that this Government......

SRI B. BASAVALINGAPPA.—How can we compare that law and our law ?

SRI M. V. RAJASHEKARAN.—Why not ? When you say that yours is a very progressive Government, why not you do that ?

SRI B. BASAVALINGAPPA.—This is not a permanent feature; it is only a temporary one. We are going to complete the whole process in a few months. Why should a separate Directorate and a separate Ministry be there to implement this ?

SRI M. V. RAJASEKHARAN.—I am extreemely sorry for the ignorance of the Hon'ble Minister. I do not know how to impress upon the Hon'ble Minister. By just passing a piece of legislation, the Land Reforms May not deliver the economic contents.

SRI B. BASAVALINGAPPA.—The foreigners have no knowledge of our country. If we adopt those laws, we may get into trouble.

I am only trying to make you understand that just passing the legislation or distribution of land is not the end of all; you have to take up other follow-up steps like financing the land making avilable the other inputs so that they would be able to produce more. The l nd has distributed with the sole object of making the land productive and also the ensure economic and social justice to the poor men; solving the unemployment in the rural areas. The land ration is so much windened there is very little land arailable compared to the growth of population You must understand the laws of it. If you are unwilling to understand me, I cannot help it. I can take the horse to the water but if the horse does not want to drink the water, I cannot help it.

1-00 P.M.

I was just pointing out the need for a separate Directorate for the Land Reforms. This Directorate is quite necessary to implement the land reforms measures. I may add that there is need to draw other departments also to develop the land. A Co-ordination

Committee should be set up to see that the various departments would go to help these tenants who have got just a. bare land. In other coontries where the land reforms were introduced, immediate steps were taken; follow up action was taken to provide all the inputs to bring the land under cultivation. Here what has happened, the Revenue Department is entrusted with this work. The Tehsildars and the Assistant Commissioners are required to concentrate their attention on this work. At present this officers are concentrating their attention only in distributing the land which they have acquired from the owners but they have not taken action to provide other necessary facilities. Therefore I plead with the government that they should constitute a State Tenancy Board to that the tenants can come together and discuss about their problems; how to get the facilities from various other organisations. I hope the Hon. Minister will be able to consider this point.

When the land reforms were introduced from the first time in the World, particularly in Japan after the II World War, they were introduced with a sword, with much vehimence. Japan at that time was under the occupation of U.S. military force. The military force brought in all supporting departments to help the farmers. Therefore the land reforms was successful in Japan. I would quote, the Formola where they have successfully implemented the land reforms programme In fact in every province they have made a poorman as the Chairman of the Land Reforms Committee. They have brought in several department together and they have introduced perfect co-ordination so that the benefits would go to the tenants. I would plead with this government to bring in such bodies in our state as early as possible.

Coming to the Land Tribunals, these tribunals were set up with a view to render justice without any less of time, without any cost being involved to the tenants, that is one of the reasons. What do you see today in most of the tribunals? these tribunals have become places of corruption. In fact I am not making any new complaints here The Leader of this House has made so many statements in the public accusing the way in which most of the tribunals are working in the State. I hope the government would not give any room for that. When the tribunals were constituted, they had not provided for any appeal. Here I would like to draw the attention of the House to make some provision for appeal so that if any injustice is done by the tribunnals, they can get justice in the appellate authority. I am not pleading that this appellate power should vest in the judiciary. They will have to constitute another set of tribunals with appellate powers so that they will be able to entertain appeals and render justice if the lower tribunals have tampered with the records.

I was trping to make this government to understand about the various aspects of land reforms measures.

Coming to the compensation, unfortunately this government has not relaised how many poor people who have lost their lands have become destitutes. Here I would like to plead with the government to pay compensation to the people particularly the widoes and the minor children who have nothing to fall back upon; they are today almost in the streests. I would request the government immediately to see that necessary funds are made available for payment of compensation to this unfortunate section of the community who have nothing to fall back upon. Here again I would like to quote one of very fine examples particularly in Asian Region, how Formosa has done in an exemplary way while giving compensation to the former land owners. Let this government give the lumpsum to such people to those who have nothing to full back and let that money be invested in certain government shares, That is what the other governments have done as they would be able to earn some interest. I understand that the total amonnt required for payment of compensation is Rs. 60 crores. If they were to pay compensation in one instalment, this Rs. 60 crores can be invested in government shares, in certain public limited companies so that they can be earn some interest and indirectly this benefit would accrue to the community. I hope the government would consider this point.

Coming to the administrative side, I was just telling that most of the officers who are entrusted with the implementation of the land reforms do not really understand the real purpose and objectives with which this legislation is made in this country. I would like to plead with the government, let them start some training programme to these officers so that they can understand the objectives and the principles behind this legislation and implement it more vigorously. Under the scheme of things, it is not only the administrator but also the politicians should be given a training.

SRI A. LAKSHMISAGAR.—Not only the Members but also the Ministers should be imparted training in this programme so that they may not commit mistakes. If they commit mistakes, the people would suffers

SRI B. BASAVALINGAPPA.—I agree with the suggestion of Sri Lakshmisagar. We may have to send the MLAs to training schools.

SRI M. V. RAJASEKHARAN.—Most of the politicians who are on the other side do not believe in this lagislation. Irrespective of the political affiliation, the land reforms is one of the most important economic and social measure which has been implemented in this

country. That is why I am suggesting that apart from the civil servants, the training should be given to the politicians because they must be made to realise the importcant of this legislation.

And then the general public and the land owner. I put more importance on this aspect of educating the land owner. What is happening in the country to days? There is unnecessarily a sort of conflict and a confrontation is built in the minds of the people. I know some parties are interested in it. But in a contry like ours which claim to have cultural heritage of many many thousands of years, it is not proper to start such things. When it comes to that stage, I welcome it but not at this stage. That is why I plead let them take some educative measures in the interest of land reforms measures. I am not just making this suggestion off hand. This is being tried in many countries so that there is less confrontation and there is less opposition from the land owners' side and let them also become in partners in the development of the country. Let them utilise all the existing media to educate the politicians, beauractrats, civil servants, the beneficiaries and then the land owners. I think, if this step is taken. probably, I fell that the land legislation will have a smooth sail. I would like to the attention of the Government to one aspects. Next year, in September, the United Nations Organisation is holding a world conference to assess the land reform measures and find out how many people were benefited in the rural areas etc., In fact, we are going to have a sub-regional conference in Bangalore, shortly. I request the Government to take some interest and send their officers. In Bangalore, fortunately, we have the organisation which is conducting this conference. They have sent out letters to all Chief Secretaries in other States to depute their officers concerned with land reform measures so that they may be able to attend to this conference not only here, but also outside. I request the Minister to give little throught to this and then see that proper persons are nominated to this.

Lastely, I would like to sum up and say that this reform can be implemented effectively taking the people into confidence. Unless that is done, it is very difficult. Because, they are going to face lot of hurdles. They have already realised it. That is why they have brought somany amendments before the House. I would like to deal with two important amendments. Firstly, with regard to confirming the ownership right on agricultural labourers. I am glad that the Hon. Minister has brought some amendment to the amended legistation and I hope that he would take care to see that unecessary letigation would not give room for delay while implimenting that sort of legislation. I hope he would give full consideration to this point.

Second point is this, Unfortunately, we are talking about giving full rights to the women. The other day, when the Madam Deputy Chairman was elected, they praised the role of a woman. But wether this Government has done anything as a far as this legislation is concerned. Women are given the second grade citizens treatment. I want to know whether they are going to treat the women on par with men? Woman has been denied the full share whether it is in land or in other matters. Therefore, I plead, at lest when you are presiding over the destinies, I hope this Government will take care to see that full rights of the women are restored.

SRI B. BASAVALINGAPPA.—Let out the Member make such statement on women. The women have to play two roles one before marriage and another after marriage. Tell us how we should tackle the problem before marriage and after marriage.

SRI M. V. RAJASHEKHARAN.—I leave the matter to Miss Pramila who will answer those points.

Before, I conclude, I would like to touch upon one more point, with regard to the classification of land. I am glad the Hon. Minister has also realised it and already amended it. Here, I would like to caution the Government. Unless proper surveys are undertaking and unless proper assessments are done, how are you going to classify which I am not able to understand. It needs a thorough survey because, every piece of land has to be assessed. Unless this is done, great injustice will be done to the people. So, they should take steps immediately and see that the lands are surveyed and survey maps are prepared and ownerships are brought to record. With these words, I whole heartedly welcome this with certain reservations with I have already explained.

† ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಮಾನ್ಯ ಕಂದಾಯ ಮಂತ್ರಿಗಳು ತಂದಿರತಕ್ಕಂಥಾ ತಿದ್ದುಪಡಿ ಬಗ್ಗೆ ಕೆಲವು ಸಲಹೆಗಳನ್ನು ಕೊಡಲಿಕ್ಕೆ ನಾನು ಇಷ್ಟಪಡುತ್ತೇನೆ. ಯಾವುದೇ ಶಾಸನವನ್ನಾದರೂ ಕೂಡ ಸ್ವಂತ ಅನುಭವದ ಮೇಲೆ ಸಂದರ್ಭಕ್ಕೆ ಅನುಸಾರವಾಗಿ ತಿದ್ದುಪಡಿ ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಈಗಿನ ತಿದ್ದುಪಡಿಗಳು ಅವಶ್ಯಕವಾಗಿವೆ. ಆದರೆ ಈ ತಿದ್ದುಪಡಿಗಳು ಎಲ್ಲಾ ಸಮಸ್ಯೆಗಳಿಗೂ ಕೂಡ ಪರಿಹಾರವಾಗುವಂತಿರ ಬೇಕಾಗಿರುತ್ತದೆ, ಅದು ಇಲ್ಲದೇ ಹೋದರೆ ಅದು ಸ್ವತಂತ್ರವಾಗಿ ಸರ್ವಾಂಗೀಣವಾಗಿ ಹೊಂದಿಕೊಂಡು ಹೋಗುವುದು ಕಷ್ಟ. ಈವೊತ್ತು ಮಾನ್ಯ ಕಂದಾಯ ಮಂತ್ರಿಗಳು ತಂದಿರತಕ್ಕಂಥಾ ತಿದ್ದುಪಡಿಗಳು ಏನು ಇವೆ. ಇವು ಭೂಸುಧಾರಣಾ ಕಾನೂನಿನ ಎಲ್ಲಾ ಸಮಸ್ಯೆಗಳನ್ನೂ ಕೂಡ ಬಗೆಹರಿಸುವ ಹಂತದಲ್ಲಿ ಇಲ್ಲ ಎಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಕಳೆದ ಅಧಿವೇಶನದಲ್ಲಿ ನಾನು ಅನೇಕ ಸಾರಿ ಈ ಬಗ್ಗೆ ಹೇಳಿದ್ದೇನೆ. ಏನೆಂದರೆ ಗೇಣಿದಾರನು ಪರಿಹಾರ ಕೊಡತಕ್ಕಂಥಾ ವ್ಯವಸ್ಥೆ ಏನು ಇದೆ, ಅದರಲ್ಲಿ ತಪ್ಪು ಇದೆ ಎಂದು. ಏತಕ್ಕೆಂದರೆ ಕೂಡಲೇ ಅವನು ಪರಿಹಾರ ಕೊಡುವುದಕ್ಕೆ ಸಾಧ್ಯವಿಲ್ಲ. ಈಗ ಇದಕ್ಕೆ ತಾವು ಏನು ಒಂದು ಪರಿಹಾರ ಸೂಚನೆ ಮಾಡಿದ್ದೀರಿ, ಆ ಪರಿಹಾರ ಕೊಡುವುದಕ್ಕೆ ಒಟ್ಟು ೪೦ ಕೋಟಿ ರೂಪಾಯಿ ಆಗಬಹುದು. ಈ ೪೦ ಕೋಟಿ ರೂಪಾಯಿ ಪರಿಹಾರದ ಬಗ್ಗೆ ಸರ್ಕಾರ ಮನಸ್ಸು ಮಾಡಿದರೆ ಕೇಂದ್ರ ಸರ್ಕಾರದ ನೆರವಿನಿಂದಲೋ ಅಥವಾ ಬೇರೆ ರೀತಿಯಿಂದ ಅವರಿಗೆ ಒಂದೇ ಸಾರಿ ಕೊಟ್ಟು ಕೂಡಲೇ ತೀರ್ಮಾನ ಮಾಡಿದರೆ ಯಾರು ಹಿಡುವಳಿದಾರರು ಇರುತ್ತಾರೋ ಅವರ

ಆಶೀರ್ವಾದವನ್ನೂ ಕೂಡ ಸರ್ಕಾರ ಪಡೆಯುಬಹುದು ಜೊತೆಗೆ ಗೇಣಿದಾರ ಅಂತ ಏನು ಅನ್ನಿಸೊಂಡಿರುತ್ತಾರೋ ಅವನು ಈ ಒಂದು ನೆರವಿನ ಮೂಲಕ ಕೂಡಲೆ ಭೂಮಾಲೀಕ ಅಂಥ ಅನಿಸಿಕೊಳ್ಳುತ್ತಾನೆ. ಅದು ಬಿಟ್ಟು ಅವನು ಅದನ್ನು ಇಪ್ಪತ್ತು ಕಂತಿನಲ್ಲಿ ತೀರಿಸಬೇಕೆಂದರೆ ವಿನಾಕಾರಣ ಬಡ್ಡಿಯನ್ನೂ ಕೂಡ ಜಾಸ್ತಿ ಕಟ್ಟಬೇಕಾದ ಪರಿಸ್ಥಿತಿ ಬರುತ್ತದೆ. ಈ ವಿಚಾರವಾಗಿ ನಾನು ಮಾನ್ಯ ಕಂದಾಯ ಸಚಿವರಲ್ಲಿ ಅನೇಕ ಸಲ ಅರಿಕೆ ಮಾಡಿಕೊಂಡಿದ್ದೇನೆ. ಹಿಂದಿನ ಶಾಸನದ ರೀತ, ಗೇಣಿದಾರ ಕೊಡಬೇಕಾದ್ದು ಕೇವಲ ನಾಲ್ಕು ಪರ್ಸೆಂಟ್ ಬಡ್ಡಿ ಮಾತ್ರ. ಇವತ್ತಿನ ಶಾಸನದಿಂದಾಗಿ, ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನಿಂದ ಆತ ಸಾಲ ತೆಗೆದುಕೊಂಡು ಬಂದು ; ಅದಕ್ಕೆ ಹನ್ನೊಂದು ಪರ್ಸೆಂಟ್ ಬಡ್ಡಿ ತೆತ್ತು, ಆ ಸಾಲವನ್ನು ಪರಿಹಾರಾರ್ಥವಾಗಿ ಸರ್ಕಾರದ ಖಜಾನೆಗೆ ಭರ್ತಿ ಮಾಡುತ್ತಾನೆ ಆ ಕಡೆ ಭೂಮಾಲೀಕನಿಗೂ ಅದರ ಪ್ರಯೋಜನ ಸಿಕ್ಕಲಿಲ್ಲ ; ಈ ಕಡೆ ಗೇಣಿದಾರ ತಾನು ಪಡೆದ ಸಾಲಕ್ಕೆ ನಾಲ್ಕು ಪರ್ಸೆಂಟ್ ಬಡ್ಡಿ ಬದಲು ಹನ್ನೊಂದು ಪರ್ಸೆಂಟ್, ಅಂದರೆ ಏಳು ಪರ್ಸೆಂಟ್ ಜಾಸ್ತಿ ಕೊಡಬೇಕಾಗಿದೆ. ನನ್ನ ಶಾಸಕ ಸನ್ಮಿತ್ರರನೇಕರಿಗೆ ಚೆಕ್ ಕೊಡುವ ಸಮಾರಂಭದ ಅನುಭವವಿರಬಹುದು. ಸಮಾರಂಭಗಳಿಗೆ ಹೋಗುವಾಗ ಇನ್ನು ಈ ಸಮಸ್ಯೆ ಬಗೆಹರಿದುಬಿಡುತ್ತದೆ, ಭೂಮಾಲಿಕನಿಗೆ ಇವತ್ತೇ ಪರಿಹಾರ ಲಭ್ಯವಾಗುತ್ತದೆ ಎಂದು ಮನಸ್ಸಿನಲ್ಲಿರುತ್ತದೆ. ಆದರೆ, ಅಲ್ಲಿಗೆ ಬಂದ ತಹಶೀಲ್ದಾರ್‌ರವರು ಚೆಕ್ ತೆಗೆದುಕೊಳ್ಳುತ್ತಾರೆ ; ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನವರು ಚೆಕ್‌ನ್ನು ಕೊಡುತ್ತಾರೆ. ಚೆಕ್ ಗೇಣಿದಾರನ ಹೆಸರಿನಲ್ಲಿ ಇರುತ್ತದೆ. ಕೊನೆಗೆ ಆ ಚೆಕ್ ಸರ್ಕಾರಿ ಖಜಾನೆಗೆ ಜಮಾ ಆಗುತ್ತದೆ. ಇದರಿಂದಾಗಿ, ಸರ್ಕಾರಿ ಖಜಾನೆಯಲ್ಲಿ ಒಂದು ಮೊತ್ತ ನಿರ್ಮಾಣವಾಗುತ್ತದೆಯೇ ಹೊರತು ಭೂಮಾಲೀಕನಿಗೆ ಆ ಪರಿಹಾರ ಸಿಕ್ಕುವುದಿಲ್ಲ ಆದರೆ ಗೇಣಿದಾರ ಮಾತ್ರ ಏಳು ಪರ್ಸೆಂಟ್ ಬಡ್ಡಿ ಜಾಸ್ತಿ ಕೊಡಬೇಕಾಗಿದೆ. ಈ ರೀತಿಯ ವ್ಯವಸ್ಥೆಯಿಂದ ಭೂಮಾಲೀಕನಿಗೂ ತೊಂದರೆ ; ಗೇಣಿದಾರನಿಗೂ ತೊಂದರೆ. ಗೇಣಿದಾರ ಯಾವ ತಾರೀಖಿನಿಂದ ಜಮೀನನ್ನು ಗೇಣಿ ಮಾಡುತ್ತಿದ್ದಾನೆ, ಅಂದಿನಿಂದಲೇ ಅವನು ಆ ಜಮೀನಿನೊಡೆಯನೆಂದು ನೇರವಾಗಿ ಶಾಸನ ಮಾಡಬೇಕೆಂದು ನಾನು ಪದೇ ಪದೇ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಗೊತ್ತಾದ ತಾರೀಖಿನಿಂದಲೇ ಗೇಣಿದಾರ ತಾನು ಸಾಗುವಳಿ ಮಾಡುತ್ತಿದ್ದ ಜಮೀನೊಡೆಯನೆಂದು ತೀರ್ಮಾನ ಮಾಡಿ, ಭೂ ಮಾಲೀಕರಿಗೆ ಪರಿಹಾರವನ್ನು ಸರ್ಕಾರದ ಖಜಾನೆಯಿಂದ ಕೊಡುವ ಹಾಗೆ ಮಾಡಿದರೆ ಎಲ್ಲ ಸಮಸ್ಯೆಗಳೂ ತೀರುತ್ತವೆ. ಆಗ ಸಣ್ಣ ಹಿಡುವಳಿದಾರ, ವಿಧವೆ, ಹೆಣ್ಣು ಮಕ್ಕಳು ಮುಂತಾದವರ ಸಮಸ್ಯೆಗಳೊಂದೂ ಇರುವುದಿಲ್ಲ. ಇಂತಹ ಒಂದು ತಿದ್ದುಪಡಿಯನ್ನು ತರಬೇಕೆಂದು ನಾನು ಅನೇಕ ಸಲ ಕಳಕಳಿಯಿಂದ ಕೇಳಿಕೊಂಡಿದ್ದೆ. ಆದರೆ, ಇಂದು ತಂದಿರುವ ತಿದ್ದುಪಡಿ ಮಸೂದೆಯಲ್ಲೂ ಸಹ ಮತ್ತೆ ಮೂರು ತಿಂಗಳ ಕಾಲಾವಕಾಶವನ್ನು ಡಿಕ್ಲರೇಷನ್ ಮಾಡಿಕೊಳ್ಳುವವರಿಗಾಗಿ ವಿಸ್ತರಿಸಲಾಗಿದೆ. ಇದರಿಂದ ಸಮಾಜದಲ್ಲಿ ಮತ್ತೊಂದು ರೀತಿಯ ಕ್ಷೋಭೆಯನ್ನುಂಟು ಮಾಡುವ ಅನೇಕ ಜನ ಫೂಟ್ ಲಾಯರ್‌ಗಳೂ ಹುಟ್ಟಿಕೊಳ್ಳುತ್ತಾರೆ. ಅವರಿಂದ-ಇವರಿಂದ ಅರ್ಜಿ ಹಾಕಿಸೋದು, ಭೂ ನ್ಯಾಯ ಮಂಡಲಿಗಳಿಗೆ ಪೆಟಿಷನ್‌ಗಳನ್ನು ಬರೆಸೋದು—ಇದೇ ಅವರ ಕೆಲಸ. ಇನಾಮು ಜಮೀನುಗಳನ್ನು ಭೂ ನ್ಯಾಯ ಮಂಡಲಿಗಳ ವ್ಯಾಪ್ತಿಗೆ ಒಳಪಡಿಸುವುದರಿಂದ ಡಿಕ್ಲರೇಷನ್ ಅವಧಿಯನ್ನು ಹೆಚ್ಚು ಮಾಡಲಾಯಿತೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಹಾಗಾದರೆ, ಇನಾಮು ಜಮೀನುಗಳಿಗೆ ಸಂಬಂಧಪಟ್ಟ ವಿಚಾರಗಳನ್ನು ಮಾತ್ರ ಭೂ ನ್ಯಾಯ ಮಂಡಲಿಗಳ ಮುಂದೆ ಡಿಕ್ಲರೇಷನ್ ಮಾಡಿಕೊಳ್ಳುವುದಕ್ಕೆ ಕಾಲ ವಿಸ್ತರಿಸಬೇಕಾಗಿತ್ತೇ ಹೊರತು ಪುನಃ ಎಲ್ಲ ರೀತಿಯ ಜಮೀನುಗಳಿಗೂ ಕಾಲ ವಿಸ್ತರಿಸುವುದು ಸರಿಯಲ್ಲ. ಇದರಿಂದ, ಇಲ್ಲದ ಕ್ಷೋಭೆಯನ್ನು ಫೂಟ್ ಲಾಯರ್‌ಗಳು ಪ್ರತಿಯೊಂದು ತಾಲ್ಲೂಕಿನಲ್ಲೂ ಉಂಟು ಮಾಡುತ್ತಾರೇನೋ ಎನ್ನುವ ಸಂಶಯ ನನಗಿದೆ. ಸಾಮಾನ್ಯವಾಗಿ ಎಲ್ಲರೂ ಸಹ ಸತ್ಯವಾದ ಡಿಕ್ಲರೇಷನ್ ಕೊಡುವುದಿಲ್ಲ. ಭೂ ನ್ಯಾಯ ಮಂಡಲಿಗಳಿಗೆ ಎಂತೆಂಥ ಡಿಕ್ಲರೇಷನ್‌ಗಳು ಬರುತ್ತವೆಂಬುದು ಅಲ್ಲಿ ಸದಸ್ಯರಾಗಿರುವ ಸನ್ಮಿತ್ರ ಶಾಸಕರನೇಕರಿಗೆ ಗೊತ್ತಿದೆ. ವೈಯಕ್ತಿಕ ದ್ವೇಷಕ್ಕಾಗಿ, ರಾಜಕೀಯ ದ್ವೇಷಕ್ಕಾಗಿ, ಇನ್ನು ಏನೇನೋ ದ್ವೇಷಕ್ಕಾಗಿ ಡಿಕ್ಲರೇಷನ್‌ಗಳನ್ನು ಅಲ್ಲಿ ಕೊಡುತ್ತಿರುತ್ತಾರೆ. ನಮಗೆ ಇಂತಹವು ಎಷ್ಟೋ ಗೊತ್ತಾಗಿವೆ. ಇದನ್ನೇ ಕಾಯುತ್ತಿರುವ ಫೂಟ್ ಲಾಯರ್‌ಗಳು, ಈ ತಿದ್ದುಪಡಿ ಪಾಸಾದ ಕೂಡಲೇ ಹಳ್ಳಿ ಹಳ್ಳಿಯಲ್ಲೂ ಹುಟ್ಟಿಕೊಳ್ಳುತ್ತಾರೆ. ಅವರಿಗಿದೇ ದಂಧೆ. ನಮ್ಮ ತಾಲ್ಲೂಕಿನಲ್ಲಿ ಎಷ್ಟು ಡಿಕ್ಲರೇಷನ್‌ಗಳು ಬರಬೇಕಾಗಿತ್ತೋ ಅಷ್ಟೂ ಬಂದಿವೆ ; ಬೇರೆ ತಾಲ್ಲೂಕ್‌ಗಳ ಮಾಹಿತಿ ನನಗೆ ಗೊತ್ತಿಲ್ಲ. ಬಹುಶಃ ಎಲ್ಲೂ ಇಲ್ಲವೆಂದೇ ನಾನು ಭಾವಿಸುತ್ತೇನೆ. ಆದುದರಿಂದ, ಮಾನ್ಯ ಸಚಿವರು ಕಾಲ ವಿಸ್ತರಣೆಯ ತಿದ್ದುಪಡಿಯನ್ನು ಕೈಬಿಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಗೇಣಿಶಾಸನದ ೩೮ನೇ ಕಲಂಗೆ ತಿದ್ದುಪಡಿ ತರಲಾಗಿದೆ. ಭೂಹೀನ ಕೂಲಿಗಾರರಿಗೆ ರಕ್ಷಣೆ ಕೊಡಬೇಕೆನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ, ಅವರಿಗೆ ರಕ್ಷಣೆ ಕೊಡುತ್ತೇವೆ ಎಂದು ಹೇಳುವ ನೆಪದಲ್ಲಿ ಸಾಮಾಜಿಕ ಕ್ಷೋಭೆಯಾಗತಕ್ಕ ಕಲಂನ್ನು ಹಾಕಿದರೆ ಅದರಿಂದ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚಾಗುತ್ತದೆ ಎನ್ನುವುದು ನನ್ನ ವಾದ; ಬೇರೆ ಭಾಗದ ಪರಿಸ್ಥಿತಿ ಹೇಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಆದರೆ ನಮ್ಮ ಮಲೆನಾಡು ಪ್ರದೇಶಗಳ ಪರಿಸ್ಥಿತಿ ಹೇಳುವುದಾದರೆ, ಭಾಗಾಯಿತು ಜಮೀನೊಂದನ್ನು ನೋಡಿಕೊಳ್ಳಲು ಒಬ್ಬ ಕೂಲಿಗಾರರನ್ನು ಇಟ್ಟು ಅವನಿಗೆ ಆ ಭಾಗಾಯಿತು ಜಮೀನಿನಲ್ಲೊಂದು ಗುಡಿಸಲು ಹಾಕಿಕೊಟ್ಟರೆ, ವಾಸ ಮಾಡಿಕೊಂಡು ಬಂದಿರುತ್ತಾರೆ. ಈ ತಿದ್ದುಪಡಿಯನ್ನು ನೋಡಿಕೊಂಡು, ನಾಳೆಯು ದಿವಸ ಅವನು ಕೆಲಸ ಮಾಡುವುದಿಲ್ಲ. ಜಮೀನಿನ ಯಜಮಾನ ಅವನನ್ನು ಬಿಡಿಸಲಿಕ್ಕೆ ಹೋದರೂ, ಅವನು ಆ ಗುಡಿಸಲನ್ನು ಬಿಡುವುದಿಲ್ಲ. ಇಂತಾ ತಾರೀಖಿನಿಂದ ನಾನು ಈ ಗುಡಿಸಲಿನಲ್ಲಿದ್ದೆ, ಈ ಗುಡಿಸಲು ನನ್ನದು ಎಂದು ಸಂಬಂಧಪಟ್ಟ ತಹಶೀಲ್ದಾರರ ಹತ್ತಿರ ಒಂದು ಡಿಕ್ಲರೇಷನ್ ಕೊಡುತ್ತಾನೆ. ನಂತರ, ಆ ಗುಡಿಸಲು ಅವನಿಗೆ ಖಾಯಂ ಆಗುತ್ತದೆ. ಆದರೆ, ಭಾಗಾಯಿತ್‌ನಲ್ಲಿ ಅವನು ಕೆಲಸ ಮಾಡುವುದಿಲ್ಲ; ಬೇರೆಯವರ ಜಮೀನಿನಲ್ಲಿ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಾನೆ. ಆಗ ಆ ಭಾಗಾಯಿತ್‌ನ ಮಾಲಿಕ ಇನ್ನೊಬ್ಬ ಕೂಲಿಗಾರರನ್ನು ಕೆಲಸಕ್ಕೆ ಇಟ್ಟುಕೊಳ್ಳಲೇಬೇಕಾಗುತ್ತದೆ; ಅವನಿಗೂ ಒಂದು ಗುಡಿಸಲು ಬೇಕಾಗುತ್ತದೆ. ಮತ್ತೆ ಈ ಕೂಲಿಗಾರನೂ ಅದೇ ರೀತಿ ಮಾಡಲು, ಭೂಮಾಲೀಕ ಗುಡಿಸಲಿನಿಂದ ಅವನನ್ನು ಬಿಡಿಸುವುದಕ್ಕಾಗುವುದಿಲ್ಲ. ಈ ಜಿಜ್ಞಾಸೆಯಿಂದ ಭೂಮಾಲೀಕನ ಸ್ವಂತ ಜಮೀನು ಡಿಸಾಲ್ವ್ ಆಗುವ ಪರಿಸ್ಥಿತಿ ಬರುತ್ತದೆ. ಆದುದರಿಂದ, ಮಾನ್ಯ ಸಚಿವರು ಇದನ್ನು ಪುನರ್‌ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ತಾವು ದಯವಿಟ್ಟು ತಿದ್ದುಪಡಿಯನ್ನು ನೋಡಿ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ತಿದ್ದುಪಡಿಯಲ್ಲಿ ಬೇರೆ ಕಡೆ ಜಮೀನು ಕೊಡಬೇಕೆಂದು ಇದೆ. ಅದರ ಬದಲು ಪರಿಹಾರ ಕೊಡಬೇಕೆಂದು ಹೇಳಿಬಿಟ್ಟಿದ್ದರೆ ಚೆನ್ನಾಗಿತ್ತು. ಇಂಡಸ್ಟ್ರಿಯಲ್ ಲೇಬರ್ ಆಕ್ಟ್ ಪ್ರಕಾರ ತಿಂಗಳಿಗೆ ಹದಿನೈದು ದಿವಸದ ಸಂಬಳವನ್ನು ಪರಿಹಾರವಾಗಿ ಕಾರ್ಮಿಕರಿಗೆ ಇಂತಹ ಸಂದರ್ಭಗಳಲ್ಲಿ ಕೊಡಬೇಕೆಂದಿದೆ. ಅದೇ ರೀತಿ ಇಲ್ಲೂ ಸಹ ಪರಿಹಾರ ಕೊಡಬೇಕೆಂದು ಮಾಡಿದರೆ ಭೂಮಾಲೀಕನಿಗೂ ತೊಂದರೆಯಾಗುವುದಿಲ್ಲ ಮತ್ತು ಕೂಲಿಗಾರನಿಗೂ ತೊಂದರೆಯಾಗುವುದಿಲ್ಲ. ಆದಕಾರಣ ಇಬ್ಬರಿಗೂ ತೊಂದರೆಯಾಗದಂತಹ ಇಂತಹ ತಿದ್ದುಪಡಿ ಕಾನೂನು ತರುವುದು ಸೂಕ್ತವೆಂದು ನನಗನ್ನಿಸುತ್ತದೆ. ಇನ್ನು In clause 11, Any member who absents himself for three consecutive meetings of the Tribunal except with the written permission of the Chairman shall cease to be a member.'' ಎಂದು ಹೇಳಲಾಗಿದೆ. ಕಳೆದ ಶಾಸನ ಸಭೆಯಲ್ಲಿ ಈ ತಿದ್ದುಪಡಿ ಬಂದಾಗ ಸರ್ಕಾರಿ ಅಧಿಕಾರಿಗಳನ್ನು ಭೂ ನ್ಯಾಯ ಮಂಡಲಿಗಳಿಗೆ ಅಧ್ಯಕ್ಷರನ್ನಾಗಿ ಮಾಡುವ ವಿಚಾರದಲ್ಲಿ ನಾವು ಭಿನ್ನಾಭಿಪ್ರಾಯ ವ್ಯಕ್ತಪಡಿಸಿದ್ದೆವು. ಪ್ರಜಾಪ್ರಭುತ್ವದಲ್ಲಿ ಯಾವುದೇ ಸಮಿತಿಯಲ್ಲಾಗಲೀ ಒಬ್ಬ ತಹಶೀಲ್ದಾರ್ ಅಥವಾ ಒಬ್ಬ ಅಸಿಸ್ಟೆಂಟ್ ಕಮಿಷನರ್ ಅಧ್ಯಕ್ಷನಾಗಿರುವುದು, ಶಾಸನ ಸಭಾ ಸದಸ್ಯರು ಸದಸ್ಯರಾಗಿರುವುದು ಸರಿಯಾದುದಲ್ಲ; ಶಾಸನ ಸಭಾ ಸದಸ್ಯರೇ ಅಧ್ಯಕ್ಷರಾಗಿರಬೇಕೆನ್ನುವುದು ನನ್ನ ವಾದ. ಈ ವಾದಕ್ಕೆ ಪುಷ್ಟಿಯನ್ನು ಈ ಕಡೆ ಮತ್ತು ಆ ಕಡೆ ಮಾನ್ಯ ಸದಸ್ಯರುಗಳೆಲ್ಲರೂ ಕೊಟ್ಟಿದ್ದರು. ಭೂ ನ್ಯಾಯ ಮಂಡಲಿಯ ಮೂರು ಸಭೆಗಳಿಗೆ ಗೈರುಹಾಜರಾದರೆ ಸದಸ್ಯತ್ವ ರದ್ದಾಗುತ್ತದೆ ಎಂದು ಇಲ್ಲಿ ತಿದ್ದುಪಡಿ ತರಲಾಗಿದೆ. ಶಾಸನ ಸಭೆ ವರ್ಷದಲ್ಲಿ ನಾಲ್ಕಾರು ತಿಂಗಳು ನಡೆಯುತ್ತಿರುತ್ತದೆ. ಆಸಕ್ತಿ ಇರುವ ಸದಸ್ಯರು ಸಭೆಯ ಕಲಾಪಗಳಲ್ಲಿ ಭಾಗವಹಿಸಬೇಕಾಗುತ್ತದೆ. ಗೈರುಹಾಜರಾಗುವ ಸಂದರ್ಭದಲ್ಲಿ ಸದಸ್ಯರು ಅಸಿಸ್ಟೆಂಟ್ ಕಮಿಷನರ್ ಅವರ ಪರವಾನಿಗೆ ತೆಗೆದುಕೊಳ್ಳಬೇಕೆಂದಿದೆ. ಅಂದರೆ, ನಾವು ಈ ಶಾಸನ ಸಭೆಗೆ ಬರುವ ಮುನ್ನ ''ಅಪ್ಪಾ! ನಾವು ಶಾಸನ ಸಭೆಗೆ ಹೋಗಬೇಕಾಗಿದೆ; ದಯವಿಟ್ಟು ಪರವಾನಿಗೆ ಕೊಡಿ'' ಎಂದು ಕೇಳಬೇಕೇ ?

ಶ್ರೀ ಬಿ. ಬಸವಲಿಂಗಪ್ಪ.—ಇದನ್ನು ತೆಗೆದುಬಿಡಲಾಗಿದೆ.

ಶ್ರೀ ಎಸ್. ಎಂ. ಶೀರ್‍ನಾಳಿ ಚಂದ್ರಶೇಖರ್.—ಅದಕ್ಕಾಗಿ ತಮಗೆ ಧನ್ಯವಾದಗಳು. ಒಬ್ಬ ಶಾಸನ ಸಭಾ ಸದಸ್ಯ ಒಬ್ಬ ಅಸಿಸ್ಟೆಂಟ್ ಕಮಿಷನರ್ ಅವರಿಂದ ಪರವಾನಗಿ ಪಡೆದು ಸಭೆಗೆ ಬರುವುದಕ್ಕಿಂತ ಅವಮಾನಕರವಾದ ಕೆಲಸ ಮತ್ತೊಂದಿಲ್ಲ. ಹೀಗೆ ಪರವಾನಿಗೆ ಕೇಳುವ ಬದಲು ಪಾಲಿಡಾಲ್ ಸೇವನೆಯೇ ಮೇಲು. ಇಂತಹ ಒಂದು ಕಲಂನ್ನು ತಾವು ಕೈಬಿಟ್ಟಿರುವುದನ್ನು ಕೇಳಿ ನನಗೆ ಬಹಳ ಸಂತೋಷವಾಗುತ್ತಿದೆ.

In Clause 11, you have stated as follows :

"(5A) The Deputy Commissioner may, if he deems it expedient so to do, for the ends of justice, transfer any application or other proceedings relating there to pending before any Tribunal to any other Tribunal within his jurisdiction."

SRI B. BASAVALINGAPPA.—I would like to request the Hon'ble Member Sri Shreenally Chandrashekar to read the subsequent amendments that I have brought. I think that would cut short all his arguments. Please don't be guided by purely the amendments which were printed. Please see the typed matter also.

4-30 P.M.

SRI M. C. BASAPPA.—The trouble is, you have not moved those amendments. How can we officially discuss those amendments ?

SRI S. M. SHEERNALLY CHANDRASHEKAR.—In Clause 12, you have stated as follows :—

"Amendment of Section 48A.—In Section 48A of the principal Act, in sub-section (1).—

(1) for the figures and words "31st day of December 1974", the words brackets and figures "expiry of a period of three months from the date of the commencement of Section 1 of the Karnataka Land Reforms (Amendment) Act, 1978" shall be substituted.

(2) the words and figures "provided that the Tribunal may for sufficient cause shown admit an application made beyond that date but on or before the 30th day of June 1977" shall be omitted."

ಇದನ್ನು ಕೈಬಿಡಬೇಕು. ಇನಾಮ್ ಕೇಸುಗಳನ್ನು ಟ್ರಿಬ್ಯುನಲ್‌ಗೆ ಹಾಕಬೇಕು ಎಂದರೆ ೬ ತಿಂಗಳ ಟೈಮ್ ಕೊಡಬೇಕು. ಆ ರೀತಿ ಟೈಮ್ ಕೊಡದಿದ್ದರೆ ಅದರಿಂದ ಆಗುವಷ್ಟು ಅನ್ಯಾಯ ಅಷ್ಟಿಷ್ಟಲ್ಲ ಎಂದು ನಾನು ಹೇಳುತ್ತೇನೆ.

Then Clause 13, Amendment of Section 48C.—which says as follows :—

"In Section 48C of the principal Act, after sub-Section (1), the following provise shall be inserted namely :—

"Provided that when there is no meeting of the Tribunal, the Chairman may exercise the powers of the Tribunal under Sub-Section (1)."

ಸ್ವಾಮಿ ದಯವಿಟ್ಟು ಈ ಕೆಲಸ ಮಾಡಬೇಡಿ. ಇವೊತ್ತು ಪುನಃ ಅಸಿಸ್ಟೆಂಟ್ ಕಮಿಷನರಿಗೆ ಅಧಿಕಾರ ವನ್ನು ಕೊಟ್ಟರೆ, ದೇವರೇ ಗತಿ ! ಅವರು ಟ್ರಿಬ್ಯುನಲ್ ಸಿಟಿಂಗನ್ನು ಎರಡು ದಿವಸಗಳಲ್ಲಿ ಮುಗಿಸು ತ್ತಾರೆ. ಇಂಥಾ ಅಧಿಕಾರವನ್ನು ಅವರಿಗೆ ಕೊಡುವುದಾದರೆ ಭೂಸುಧಾರಣೆ ಕಾನೂನಿನಲ್ಲಿ ಯಾವ ಒಂದು ಜನತೆಯ ಪ್ರತಿನಿಧಿಗಳು ಮಾಡತಕ್ಕ ಕೆಲಸವನ್ನು ಒಬ್ಬ ಅಧಿಕಾರಿಗೆ ಕೊಟ್ಟಂತಾಗುತ್ತದೆ. ಆ ರೀತಿ ಮಾಡಬಾರದು ಎಂದು ನಾನು ಕೇಳಿಕೊಳ್ಳುತ್ತೇನೆ.

In Clause 15, Amendment of Section 51, you have stated as follows :—

"Provided further that the amount so payable shall be paid.—

(i) in the case of a minor, a woman who has never been married, a person whose annual income from all sources is not more than two thousand and four hundred rupees or a person who is subject to physical or mental disability, in a lumpsum ;

(ii) in the case of a widow, in lumpsum or if she so elects in writing, in the form of annuity during her life time, a sum determined in such manner as may be prescribed which shall not be less than the net annual income referred to in sub-section (2) of Section 72 :..."

ಸರ್ಕಾರದವರು ಭೂಮಾಲೀಕರಿಗೆ ಪರಿಹಾರವನ್ನು ಕೊಡಬೇಕು. ಆದ್ದರಿಂದ ಒಂದು ಗೊತ್ತಾದ ದಿವಸ ಅವರಿಗೆ ಇಷ್ಟು ಪರಿಹಾರವನ್ನು ಕೊಡುತ್ತೇವೆ ಎಂದು ಹೇಳಿ ಆ ಒಂದು ಸಮಸ್ಯೆಯನ್ನು ಬಗೆಹರಿಸ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

In Clause 30 Amendment of Section 112, you have stated as follows :—

"In Section 112 of the principal Act, under the heading (B) Duties of Tribunal, for item (c) the following item shall be substituted, namely :—

(c) to hold necessary enquiry and pass orders in cases relating to registration of agricultural labourers as owners of dwelling houses and land appurtenant there to under section 38."

ಈ ಕ್ಲಾಜನ್ನು ಕೈಬಿಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ, ಟ್ರಿಬ್ಯುನಲ್‌ಗೆ ರಿವ್ಯೂ ಮಾಡತಕ್ಕ ಅಧಿಕಾರ ವನ್ನು ಕೊಟ್ಟಿರುವುದು ಸ್ತುತ್ಯಾರ್ಹವಾದುದು. ಅನೇಕ ಸಾರಿ ಯಾವುದೇ ಒಂದು ಕೋರ್ಟಿನಲ್ಲಿಯಾಗಲೀ ತಪ್ಪು ಆಗುವುದಕ್ಕೆ ಅವಕಾಶವಿದೆ. ಅದನ್ನು ಪುನರ್ ಪರಿಶೀಲನೆ ಮಾಡಲು ಟ್ರಿಬ್ಯುನಲ್‌ಗೆ ಈಗ ಅಧಿಕಾರವಿಲ್ಲ ; ಹೈಕೋರ್ಟಿಗೆ ರಿಟ್‌ಹಾಕಬೇಕು, ಅದು ರಿಮ್ಯಾಂಡ್ ಆಗಬೇಕು. ಈಗ ಹೈಕೋರ್ಟಿನಲ್ಲಿ ಸಾವಿರಾರು ರಿಟ್‌ಗಳು ಬಿದ್ದಿವೆ. ಆದ್ದರಿಂದ ಇವು ತೀರ್ಮಾನವಾಗಬೇಕಾದರೆ ಯಾವಾಗ ಆಗುತ್ತದೆಯೋ ಎಂದು ಹೇಳುವಾಗ ಜಾಗ್ರತೆ ನ್ಯಾಯ ಸಿಕ್ಕಬೇಕಾದರೆ ಇಂತಹ ಕೇಸ್‌ಗಳನ್ನು ಟ್ರಿಬ್ಯುನಲ್ ಪುನರ್ ಪರಿಶೀಲನೆ ಮಾಡುವುದಕ್ಕೆ ಅಧಿಕಾರವನ್ನು ಕೊಡಬೇಕಾದು ಅತ್ಯಂತ ಅಗತ್ಯ ಎಂದು ಕೊಟ್ಟಿದ್ದಾರೆ. ಅದಕ್ಕಾಗಿ ಮಾನ್ಯ ಮಂತ್ರಿಗಳಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಆ ಮೇಲೆ ಇನಾಮ್ ಕೇಸುಗಳ ಬಗ್ಗೆ ಡೆಪ್ಯುಟಿ ಕಮಿಷನರಿಗೆ ಕೊಟ್ಟಂತಹ ಅಧಿಕಾರವನ್ನು ಟ್ರಿಬ್ಯುನಲ್‌ಗೆ ಕೊಟ್ಟಿರುವುದು ಸ್ತುತ್ಯಾರ್ಹ. ಈಗ ಡೆಪ್ಯುಟಿ ಕಮಿಷನರ್ ಅವರ ಸ್ಥಿತಿ ಏನಾಗಿದೆ

ಎಂದರೆ, ಅವರಿಗೆ ಅನೇಕ ಕೆಲಸಗಳನ್ನು ಹೊರಿಸಿದ್ದಾರೆ. ಮಂತ್ರಿಗಳು ಹೋದರೆ ಅವರನ್ನು ರಿಸೀವ್ ಮಾಡಬೇಕು, ಕಂದಾಯದ ಬಾಕಿ ನೋಡಬೇಕು. ಹೀಗೆ ಇನ್ನೂ ಏನೇನೋ ಕೆಲಸಗಳನ್ನು ಅವರಿಗೆ ವಹಿಸಿದ್ದಾರೆ. ಅವರಿಗೆ ಅವುಗಳನ್ನು ಮಾಡುವುದಕ್ಕೇ ಕಾಲ ಇರುವುದಿಲ್ಲ, ಆದ್ದರಿಂದ ಈಗ ಇನಾಮ್ ಕೇಸುಗಳ ತೀರ್ಮಾನ ಕೊಡುವುದಕ್ಕೆ ಡೆಪ್ಯುಟಿ ಕಮಿಷನರಿಗೆ ಇದ್ದ ಅಧಿಕಾರವನ್ನು ಟ್ರಿಬ್ಯುನಲ್‌ಗೆ ಕೊಟ್ಟಿದ್ದಾರೆ. ಅದಕ್ಕಾಗಿ ಮಾನ್ಯ ಮಂತ್ರಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀಮತಿ ಎಸ್. ಪ್ರಮಿಳ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷಿಣಿಯವರೇ, ಇವೊತ್ತಿನ ದಿವಸ ಮಾನ್ಯ ಕಂದಾಯ ಮಂತ್ರಿಗಳು ಬಹಳ ದೊಡ್ಡ ಮನಸ್ಸು ಮಾಡಿ ಭೂಸುಧಾರಣೆ ಕಾಯಿದೆಗೆ ಕೆಲವು ತಿದ್ದುಪಡಿಗಳನ್ನು ತಂದಿದ್ದಾರೆ. ಇದರಲ್ಲಿ ಕೆಲವು ತಿದ್ದುಪಡಿಗಳು ಹೇಗಿವೆ ಎಂದರೆ, ಹಾವು ಸಾಯಬಾರದು, ಕೋಲು ಮುರಿಯಬಾರದು ಅಂಥಾ ತಿದ್ದುಪಡಿಗಳನ್ನು ತಂದಿದ್ದಾರೆ. ಇದರಿಂದ ರೈತನೂ ಬದುಕಬಾರದು, ಭೂಮಿ ಇರತಕ್ಕ ಭೂಮಾಲೀಕನು ಬದುಕಬಾರದು ಎನ್ನುವ ಹಾಗೆ ಇದೆ. ಭೂಮಾಲೀಕನು ಸತ್ತಮೇಲಾದರೂ ಪರಿಹಾರ ಸಿಕ್ಕುತ್ತದೆಯೋ ಇಲ್ಲವೋ ಗೊತ್ತಿಲ್ಲ. ಅಂಥಾ ತಿದ್ದುಪಡಿಗಳನ್ನು ಮಾನ್ಯ ಕಂದಾಯ ಮಂತ್ರಿಗಳು ತಂದಿದ್ದಾರೆ. ಆದ್ದರಿಂದ ನಾನು ಮಾನ್ಯ ಕಂದಾಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ, ಈಗ ಅವರು ಯಾವ ಯಾವ ತಿದ್ದುಪಡಿಗಳನ್ನು ತಂದಿದ್ದಾರೆಯೋ ಅವುಗಳನ್ನು ಮತ್ತೆ ಆಮೂಲಾಗ್ರವಾಗಿ ಪರಿಶೀಲನೆ ಮಾಡಿ ಸಮಗ್ರವಾಗಿ ಈ ಭೂಸುಧಾರಣಾ ಕಾಯಿದೆಗೆ ಬೇರೆ ತಿದ್ದುಪಡಿಗಳನ್ನು ತಂದು, ಅದನ್ನು ಶ್ರೀಮಾನ್ ಶೀರ್ನಾಳಿ ಚಂದ್ರಶೇಖರ್ ಅವರು ಹೇಳಿದ ಹಾಗೆ ಸೆಲೆಕ್ಟ್ ಕಮಿಟಿಯ ಮುಂದೆ ಇಟ್ಟು ಅಲ್ಲಿ ಸಮಗ್ರವಾಗಿ ಪ್ರತಿಯೊಂದು ಸೆಕ್ಷನ್ನೂ ನೋಡಿ ನಂತರ ಇದನ್ನು ಜಾರಿಗೆ ತರುವುದು ಒಳ್ಳೆಯದು.

ಈಗ ಇದರಲ್ಲಿ ಮೇಲ್ನೋಟಕ್ಕೆ ಕೆಲವು ತಿದ್ದುಪಡಿಗಳನ್ನು ತಂದಿದ್ದಾರೆ. ಈ ತಿದ್ದುಪಡಿಗಳ ಬಗ್ಗೆ ಮಾತನಾಡಬೇಕಾದರೆ ಈ ಭೂಸುಧಾರಣೆಯ ಕಾನೂನನ್ನು ಯಾರಿಗೋಸ್ಕರ ತಂದಿದ್ದಾರೆ, ಏತಕ್ಕಾಗಿ ತಂದಿದ್ದಾರೆ, ರೈತರಿಗಾಗಿ ತಂದಿದ್ದಾರೆಯೋ ಅಥವಾ ಬೇರೆಯವರಿಗೆ ತಂದಿದ್ದಾರೆಯೋ ಎಂದು ನನಗೆ ಅನಿಸುತ್ತಿದೆ. ಡೆಫಿನಿಷನ್ ಕ್ಲಾಜಿನಲ್ಲಿ ಒಂದು ಕಡೆ ಪರ್ಮನೆಂಟ್ ಟೆನೆಂಟ್ ಎಂದು ಕೊಟ್ಟಿದ್ದಾರೆ, ಇನ್ನೊಂದು ಕಡೆ ಟೆನೆಂಟ್ ಎಂದು ಕೊಟ್ಟಿದ್ದಾರೆ. ಕಲ್ಟಿವೇಟ್ ಪರ್ಸನಲಿ ಎಂದು ಒಂದು ಕಡೆ ಹೇಳಿದ್ದಾರೆ. ಮತ್ತೊಂದು ಕಡೆ ಪ್ರೊಟೆಕ್ಟೆಡ್ ಎಂದು ಹೇಳಿದ್ದಾರೆ. ಈ ಡಿಫಿನಿಷನ್ ತೆಗೆದು ನೋಡಿದರೆ ಇದರಿಂದ ಯಾರಿಗೆ ಅನುಕೂಲವಾಗಿದೆ ಎಂಬುದು ಗೊತ್ತಾಗುವುದಿಲ್ಲ. ೧೯೬೧ನೇ ಇಸವಿಯಲ್ಲಿ ಮಾಡಿದಂತಹ ಶಾಸನದಲ್ಲಿ ಪರ್ಮನೆಂಟ್ ಟೆನೆಂಟ್ ಎಂದು ಡೆಫಿನಿಷನ್‌ನಲ್ಲಿ ಇದೆ. ಈಗ ಅದನ್ನು ತೆಗೆದು ಹಾಕಿ Permanent Tenants means persons who cultivate personally ಎಂದು ಹೇಳಿದ್ದಾರೆ. ಪರ್ಮನೆಂಟ್ ಟೆನೆಂಟ್, ಮತ್ತು ಪ್ರೊಟೆಕ್ಟೆಡ್ ಟೆನೆಂಟ್ ಎಂದು ಯಾರಿಗೋಸ್ಕರ ಇಟ್ಟಿದ್ದಾರೆ ಎಂಬುದರ ಏನು ಎಂಬುದು ನನಗೆ ಗೊತ್ತಾಗಲಿಲ್ಲ. ಇದರಿಂದ ರೈತರಿಗೆ ಅನುಕೂಲವಾಗಿದೆಯೋ ಅಥವಾ ಭೂಮಾಲೀಕನಿಗೆ ಹೆಚ್ಚು ಅನುಕೂಲವಾಗಿದೆಯೋ ಎಂಬುದು ಗೊತ್ತಾಗುವುದಿಲ್ಲ. ಇನ್ನು ಸೆಕ್ಷನ್ ೮ ಮತ್ತು ೪೭ರಲ್ಲಿ In respect of the land for which a person is a permanent tenant, the amount payable shall be six times the difference between the rent and the land revenue payable for such lands ಎಂದು ಹೇಳಿದ್ದಾರೆ. ಇಲ್ಲಿ ಪರ್ಮನೆಂಟ್ ಟೆನೆಂಟಿಗೂ ಮತ್ತು ಆರ್ಡಿನರಿ ಟೆನೆಂಟಿಗೂ ಯಾವ ವ್ಯತ್ಯಾಸವೂ ಇದರಲ್ಲಿ ಕಾಣುವುದಿಲ್ಲ. ಪ್ರೊಟೆಕ್ಟೆಡ್ ಟೆನೆಂಟ್ ಯಾರು ಇದ್ದಾರೆ, ಪರ್ಮನೆಂಟ್ ಟೆನೆಂಟ್ ಯಾರು ಇದ್ದಾರೆ ಯಾರಿಗೆ ಎಷ್ಟು ಕಾಂಪನ್‌ಸೇಷನ್ ಕೊಡಬೇಕು ಎಂಬುದು ಇದರಲ್ಲಿ ಸರಿಯಾಗಿ ಗೊತ್ತಾಗುವುದಿಲ್ಲ. ಇವತ್ತು ಯಾವ ಗೇಣಿದಾರನೇ ಆದರೂ ನಿಮ್ಮ ಡೆಫನಿಷನ್ ಪ್ರಕಾರ ಪರ್ಮನೆಂಟ್ ಟೆನೆಂಟ್ ಆಗುತ್ತಾನೆಂದರೆ ಅನೇಕ ಭೂ ಮಾಲೀಕರಿಗೆ ಅನಾನುಕೂಲವಾಗುತ್ತದೆ. ಇದನ್ನು ತಾವು ದಯವಿಟ್ಟು ಗಮನಿಸಬೇಕು. ಉದಾಹರಣೆಗೆ ಹೇಳುವುದಾದರೆ ಒಬ್ಬ ಆರ್ಡಿನರಿ ಟೆನೆಂಟ್‌ಗೆ ೮೦೦ ರೂಪಾಯಿ ಕೊಡಬೇಕಾಗಿರುವ ಕಡೆ ೨೧೦೦ ರೂಪಾಯಿಗಳ ಕಾಂಪನ್‌ಸೇಷನ್ ಕೊಡಬೇಕಾಗುತ್ತದೆ. ತಾವು ಈ ಡೆಫನಿಷನ್‌ನ್ನು ಭೂಮಾಲೀಕರಿಗೋಸ್ಕರ ಇಟ್ಟುಕೊಂಡಿದ್ದೀರೋ ಅಥವಾ ಟೆನೆಂಟ್‌ಗೋಸ್ಕರ ಇಟ್ಟುಕೊಂಡಿದ್ದೀರೋ ಎನ್ನುವುದನ್ನು ನಾನು ಮಾನ್ಯ ಕಂದಾಯ ಮಂತ್ರಿಯವರನ್ನು ಕೇಳಬಯಸುತ್ತೇನೆ. ತಾವು ಸೆಕ್ಷನ್ ೨

(೧) ೭೪ರಲ್ಲಿ ಒಂದು ಡೆಫನಿಷನ್ ಕೊಟ್ಟಿದ್ದೀರಿ. ನಾನು ತಮಗೆ ಹೇಳುವುದೇನೆಂದರೆ ತಾವು ಹೇಳಿರುವ ಟೆನೆಂಟ್, ಪರ್ಮನೆಂಟ್ ಟೆನೆಂಟ್, ಪ್ರೊಟೆಕ್ಟೆಡ್ ಟೆನೆಂಟ್ ಏನಿದೆ, ಇದರಲ್ಲಿ ಯಾವುದಾದರೂ ಒಂದನ್ನು ಮಾತ್ರ ಇಟ್ಟುಕೊಳ್ಳಿ. ಪ್ರೊಟೆಕ್ಟೆಡ್ ಟೆನೆಂಟ್ ಎಂದು ಇಟ್ಟುಕೊಂಡರೆ ಅನುಕೂಲವಾಗಬಹುದು. ಪರ್ಮನೆಂಟ್ ಟೆನೆಂಟ್ ಎಂದು ಇಟ್ಟುಕೊಂಡರೆ ಹೆಚ್ಚಿಗೆ ಅಧಿಕಾರ ಕೊಡಬೇಕಾಗುತ್ತದೆ. ನಿಮ್ಮ ಡೆಫನಿಷನ್‌ನಲ್ಲಿ ''Permanent tenant'' means a tenant ''who cultivates land personally'' ಎಂದು ಇದೆ.

ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳುವುದಾದರೆ, ಮಾನ್ಯ ರಾಜಾಜಿಯವರು ೧೯೫೫ನೇ ಇಸವಿಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಏನೆಂದರೆ ''Let there be an end of taking away of property from one and bestowing it on another for politcal startegy'' ಎಂದು ; ಇಷ್ಟೇ ಅಲ್ಲ, It is cheap to continue in power by expleiting the legislative opportunity a party in office enjoys'' ಎಂದು ಹೇಳಿದ್ದಾರೆ. ಈ ಭೂಸುಧಾರಣೆ ಕಾನೂನು ವಿಷಯದಲ್ಲಿ ಮಾನ್ಯ ಅಂಬೇಡ್ಕರ್‌ರವರು ಹೇಳಿರುವ ಒಂದು ಮಾತನ್ನು ಇಲ್ಲಿ ಹೇಳಬಯಸುತ್ತೇನೆ. Is there a semblence of justice and fairplay in depriving woman from their livelihood at a nominal price taking away their fundamental rights ? ಎಂದು ; ಈ ಬಗ್ಗೆ ನಾನು ತಮ್ಮನ್ನು ಕೇಳಬಯಸುತ್ತೇನೆ, ಏನೆಂದರೆ ನಮ್ಮ ರಾಜ್ಯಾಂಗದಲ್ಲಿ ಕಾನೂನು ಮಾಡುವಾಗ ಹೆಣ್ಣು ಮಕ್ಕಳಿಗೂ ಮತ್ತು ಗಂಡು ಮಕ್ಕಳಿಗೂ ಸರಿಸಮಾನವಾದ ಹಕ್ಕು ಇದೆಯೆಂದು ಮಾಡಿದ್ದೀರೋ ಅಥವಾ ಹೆಣ್ಣು ಮಕ್ಕಳಿಗೇ ಬೇರೆ, ಗಂಡು ಮಕ್ಕಳಿಗೇ ಬೇರೆ ಎಂದು ಏನಾದರೂ ಮಾಡಿದ್ದೀರೋ ಎಂದು ; A daughter is a daughter throughout her life. A son is a till he gets a wife. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಒಬ್ಬ ಹೆಣ್ಣುಮಗಳ ಮದುವೆ ಆದ ಮೇಲೆ ಆಕೆಯ ಪರಿಸ್ಥಿತಿ ಏನು ಎಂಬುದನ್ನು ಯೋಚಿಸಬೇಕು. ಒಬ್ಬ ಹೆಣ್ಣುಮಗಳು ಮದುವೆ ಆಗುವವರೆಗೂ ಅಪ್ಪನ ಅಧೀನದಲ್ಲಿರುತ್ತಾಳೆ, ಮದುವೆ ಆದಮೇಲೆ ಗಂಡನ ಅಧೀನದಲ್ಲಿರುತ್ತಾಳೆ, ಅನಂತರ ಮಕ್ಕಳ ಅಧೀನದಲ್ಲಿರುತ್ತಾಳೆ. ಆಕೆಗೆ ಸ್ವಾತಂತ್ರ್ಯವೇ ಇರುವುದಿಲ್ಲ. ಆದ್ದರಿಂದ ನಾನು ತಮಗೆ ಹೇಳುವುದೇನೆಂದರೆ ಅವಿವಾಹಿತ ಹೆಣ್ಣುಮಕ್ಕಳ ವಿಷಯ ಬಂದಾಗ ತಾವು ಸೆಕ್ಷನ್ ೨ (೧೨) ಡೆಫನಿಷನ್‌ನ್ನು ಚೆನ್ನಾಗಿ ಓದಬೇಕು.

ಶ್ರೀ ಬಿ. ಬಸವಲಿಂಗಪ್ಪ.—ತಾವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಹೆಣ್ಣು ಮಕ್ಕಳು ಮದುವೆ ಆಗುವವರೆಗೆ ಯಾರ ಸಂಸಾರಕ್ಕೆ ಸೇರಿರುತ್ತಾರೆ, ಮದುವೆ ಆದಮೇಲೆ ಯಾರ ಸಂಸಾರಕ್ಕೆ ಸೇರಿರುತ್ತಾರೆ, ಮತ್ತು ಮದುವೆಯೇ ಆಗದಿದ್ದರೆ ಯಾರ ಸಂಸಾರಕ್ಕೆ ಸೇರಿದವರಾಗಿರುತ್ತಾರೆ ಎನ್ನುವ ಬಗ್ಗೆ ನಮಗೆ ಒಂದು ವಿವರಣೆಯನ್ನು ತಾವು ಕೊಟ್ಟರೆ ಬಹಳ ಒಳ್ಳೆಯದು.

ಶ್ರೀ ಎಸ್. ಪ್ರಮಿಳ.—ಒಂದು ಸಂಸಾರ ಎಂದರೆ Section 2 (12) defines ''family'' means—

(a) in the case of an individual who has a spouse or spouses, such individual, the spouse or spouses, and their minor sons and unmarried daughters, if any : ಎಂದು ಹೇಳಿದ್ದಾರೆ. ಇಲ್ಲೇ ನಮಗೂ ಮತ್ತು ನಿಮಗೂ ಇರತಕ್ಕಂಥ ತಕರಾರು. ಇಲ್ಲಿ ಮೈನರ್ ಸನ್ಸ್ ಮತ್ತು ಮೈನರ್ ಡಾಟರ್ಸ್‌ನ್ನು ಮೈನರ್ ಚಿಲ್ಡ್ರನ್ ಎಂದು ಹೇಳಿದ್ದರೆ ಏನಾಗುತ್ತಿತ್ತು. ತಾವು ಈ ಮಸೂದೆಯನ್ನು ೧೯೭೪ರಲ್ಲಿ ತಂದಿದ್ದೀರಿ. ಇವತ್ತು ಹೆಣ್ಣುಮಕ್ಕಳು ಮದುವೆ ಆಗದಿದ್ದರೆ ಅಪ್ಪನ ಹತ್ತಿರ ಇರುತ್ತಾರೆ. ಇಲ್ಲಿ ಮೇಜರ್ ಸನ್ಸ್‌ಗೆ ಎಕ್ಸ್‌ಕ್ಲೂಡ್ ಮಾಡಿದ್ದೀರಿ. ಉದಾಹರಣೆಗೆ ಸ್ವಂತ ಅನುಭವ ಇದ್ದವರಿಗೆ ಮಾತ್ರ ಅದು ಚೆನ್ನಾಗಿ ಗೊತ್ತಾಗುತ್ತದೆ. ನಾನು ನಿಮ್ಮ ಮುಂದೆ ಇಲ್ಲಿ ಅವಿವಾಹಿತ ಹೆಣ್ಣುಮಗಳು. ಈ ಸಂದರ್ಭದಲ್ಲಿ ತಮಗೆ ಒಂದು ಮಾತು ಹೇಳುವುದಾದರೆ, ನಾನು ಸ್ವಯಾರ್ಜಿತವಾಗಿ ದುಡಿದು ಒಂದು ಎಕರೆ ಜಮೀನನ್ನು ಕೊಂಡುಕೊಂಡರೆ ಅದನ್ನೂ ನಾನು ಸ್ವಂತವಾಗಿ ಇಟ್ಟುಕೊಳ್ಳುವುದಕ್ಕೆ ನಿಮ್ಮ ಈ ಕಾನೂನಿನಲ್ಲಿ ಅವಕಾಶವನ್ನು ಮಾಡಿಕೊಟ್ಟಿಲ್ಲ. ನಾನು ಅಂಥ ತಪ್ಪನ್ನು ಏನು ಮಾಡಿದ್ದೇನೆ ?

ಶ್ರೀ ಎಸ್. ಬಂಗಾರಪ್ಪ.—ಅವಿವಾಹಿತ ಮಹಿಳೆಯಾಗಿರುವುದು ನನ್ನ ತಪ್ಪೇ? ಎಂದು ಶ್ರೀಮತಿ ಪ್ರಮಿಳಾರವರು ಹೇಳುತ್ತಿದ್ದಾರೆ. ಇದು ತಪ್ಪು ಎಂದು ಬಹಳ ಜನರ ಅಭಿಪ್ರಾಯ ಇದೆ.

ಶ್ರೀಮತಿ ಎಸ್. ಪ್ರಮಿಳಾ.—ಒಂದು ಸಾರಿ ಮಾನ್ಯ ಅಂಬೇಡ್ಕರ್‌ರವರು ಒಂದು ಸೆಮಿನಾರ್ ಮಾಡಿ ಅಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದನ್ನು ತಮಗೆ ಕಳುಹಿಸಿಕೊಡುತ್ತೇನೆ. ಬಹುಶಃ ತಮಗೂ ಅಕ್ಕತಂಗಿಯರಿದ್ದರೆ ಅವರಿಗೆ ತಾವು ಈ ರೀತಿಯ ಮಾತುಗಳನ್ನು ಹೇಳುತ್ತಿರಲಿಲ್ಲವೆಂದು ನಾನು ಅಂದುಕೊಂಡಿದ್ದೇನೆ We would never like to be slaves for men unless and until we get a man who treats woman as equal.

SRI S. BANGARAPPA.—It is matter for argument.

ಶ್ರೀಮತಿ ಎಸ್. ಪ್ರಮಿಳಾ.—ಕಾನ್‌ಸ್ಟಿಟ್ಯೂಷನ್‌ನಲ್ಲಿ men and women are equal ಎಂದು ಇದೆ,

ಆದ್ದರಿಂದ ಮೇಜರ್ ಡಾಟರ್ಸ್ ಎಂಬುದನ್ನು ಎಕ್ಸ್‌ಕ್ಲೂಡ್ ಮಾಡಿ ಚಿಲ್ಡ್ರನ್ ಎಂದು ಏತಕ್ಕೆ ಹಾಕಬಾರದು ಎಂದು ತಮ್ಮನ್ನು ಕೇಳಿತ್ತೇನೆ. An unmarried daughter enjoys all the privilages. Let her not be contaminated or tagged with the husdend or with the brother. We would like to remain as a separate entity. Therefore, we request you to bring an amendment on the behalf.

ಮಹಾತ್ಮಾ ಗಾಂಧೀಜಿಯವರು ಮೇಜರ್ ಡಾಟರ್ಸ್ ವಿಷಯ ಬಂದಾಗ, ಮೇಜರ್ ಸನ್ ವಿಷಯ ಬಂದಾಗ 'they should have perfect equality' ಎಂದು ಹೇಳಿದ್ದಾರೆ.
ಆದ್ದರಿಂದ ಮೇಜರ್ ಡಾಟರ್ಸ್ ಎಂದು ಇರುವುದನ್ನು ಎಕ್ಸ್‌ಕ್ಲೂಡ್ ಮಾಡಿ ರಾಜ್ಯಾಂಗಬದ್ಧವಾಗಿ ಹೆಣ್ಣುಮಕ್ಕಳಿಗೂ ಮತ್ತು ಗಂಡುಮಕ್ಕಳಿಗೂ ಸರಿಸಮಾನವಾದ ಹಕ್ಕು ಇರಬೇಕೆಂದು ಹೇಳುತ್ತೇನೆ. ಭೂಸುಧಾರಣೆ ವಿಷಯದಲ್ಲಿ ಮಹಾತ್ಮಾ ಗಾಂಧೀಜಿಯವರು ಒಂದು ಮಾತನ್ನು ಹೇಳಿದ್ದಾರೆ. ಏನೆಂದರೆ ಇದರಲ್ಲೆ ಪೋಷಕರು ಯಾರು ಮತ್ತು ಟೆಲ್ಲರ್ಸ್ ಯಾರು ಎಂದು "The man who supplies brains & metal is a much a tiller as one who labours with his hands"

He further said "when Congress come in to power we will try to be more then just. Otherwise all the good that it might have done would disappear in the twinkling of an eye".

ಮಹಾತ್ಮಗಾಂಧೀಜಿಯವರು ಈ ಬಗ್ಗೆ ಏನು ಹೇಳಿದರು ಅದನ್ನು ನೀವು ಇವತ್ತಿನ ದಿವಸ ಉಳಿಸಿಕೊಂಡುಬರಬೇಕು.

I want you not only to be just but more than just and treat us equally. ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಪೂಜ್ಯ ಮಹಾತ್ಮಗಾಂಧಿಜೀಯವರು ಹೇಳಿರತಕ್ಕ ಅಂಶವನ್ನು ಮಾನ್ಯ ಸದಸ್ಯೆಯವರು ಇಲ್ಲಿ ಉಲ್ಲೇಖಮಾಡಿದರು. ಯಾರು ಆಕ್ಚುಯಲ್ ಆಗಿ, ಭೂಮಿಯಲ್ಲಿ ಕಷ್ಟಪಟ್ಟು ದುಡಿಯುತ್ತಾರೆ, ಅವರಿಗಿ ಸರಿಸಮವಾಗಿ ಬ್ರೇನ್ ಸಪ್ಲೈ ಮಾಡುತ್ತಾರೆ ಅವರನ್ನೂ ಸಹ ಸರಿಸಮನಾಗಿ ನೋಡಬೇಕು ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಇದನ್ನು ಅವರು ಯಾವ ಸಂದರ್ಭದಲ್ಲಿ ಹೇಳಿದರು ಎನ್ನುವುದೇ ನನ್ನ ಪ್ರಶ್ನೆ ? ಮಾನ್ಯ ಸದಸ್ಯೆಯವರು ಅವರು ಹೇಳಿದಂಥಾ ಒಂದು ವಾಕ್ಯವನ್ನು ಮಾತ್ರ ಓದಿದ್ದಾರೆ. ಬ್ರೇನ್ ಸಪ್ಲೈ ಮಾಡುವವರು ಯಾರು ? ಭೂಮಿಯನ್ನು ಉಳುಮೆ ಮಾಡತಕ್ಕವರಿಗೆ, ಪಟ್ಟಣದಲ್ಲಿ ಕುಳಿತುಕೊಂಡು ಬ್ರೇನ್ ಸಪ್ಲೈ ಮಾಡುತ್ತಾರೆ. ಅಂತಹವರನ್ನು ತೆಗೆದುಕೊಂಡು ಹೋಗಿ ಟೆಲ್ಲರ್‌ಗೆ ಸರಿಸಮಾನಾಗಿ ನೋಡುವುದಾದರೆ, ತಮ್ಮ ಪ್ರೋಗ್ರೆಸ್ಸೀವ್ ಆಟಿಟ್ಯೂಡ್‌ಗೆ ಇದು ಸರಿಹೋಗುತ್ತದೆಯೇ ?

SRI A. LAKSHMISAGAR.—That particular statement does not lend itself to that interpretation. That statement deals with the particular equality that should exist between man and man, My Learned Friend read something more than what is contained in that statement.

ಶ್ರೀಮತಿ ಎಸ್. ಪ್ರಮಿಳಾ.—ಮಾನ್ಯ ಸಚಿವರು ಆತುರ ಪಡದೆ ನಾನು ಯಾವ ದೃಷ್ಟಿಕೋಣ ಇಟ್ಟುಗೊಂಡು ಹೇಳಿದೆ ಎನ್ನುವುದನ್ನು ಗಮನಿಸಬೇಕು. ಮಹಾತ್ಮಗಾಂಧಿಯವರು, ಏತಕ್ಕೋಸ್ಕರ ಇದನ್ನು ಹೇಳಿದರು, ಯಾವ ಕಂಟೆಕ್ಸ್ಟನಲ್ಲಿ ಹೇಳಿದರು ಎನ್ನುವುದನ್ನು ತಾವು ಅರ್ಥಮಾಡಿಕೊಳ್ಳಬೇಕು. ಹೆಣ್ಣು, ಒಂದು ಮಗುವನ್ನು ೯ ತಿಂಗಳವರೆಗೆ ಹೊತ್ತು, ಹೆತ್ತು, ಜನ್ಮ ಕೊಡತಕ್ಕ ಮಾತೆ.

ಶ್ರೀ ಎಸ್. ಬಂಗಾರಪ್ಪ.—ಇದರ ಅನುಭವ ತಮಗೆ ಇಲ್ಲವೆಂದು ಇಲ್ಲಿ ಅನೇಕ ಸದಸ್ಯರ ಅಭಿಪ್ರಾಯವಾಗಿದೆ.

ಶ್ರೀಮತಿ ಎಸ್. ಪ್ರಮಿಳಾ.—ಮಾನ್ಯ ಸಚಿವರು ಅಲರ್ಟ ಆಗಿದ್ದಾರೋ ಇಲ್ಲವೊ ಎನ್ನುವುದನ್ನು ಪರೀಕ್ಷೆ ಮಾಚುವುದಕೊಸ್ಕರ ಈ ಮಾತನ್ನು ಹೇಳಿದೆ. ೯ ತಿಂಗಳವರೆಗೆ ಒಂದು ಮಗುವನ್ನು ಹೊತ್ತು, ಹೆತ್ತು, ಬೆಳಸಿ 'ಅಮ್ಮಾ' ಎನ್ನುವ ಅಕ್ಷರವನ್ನು ಕಲಿಸಿದಂಥ ಗುರು ತಾಯಿ ಎನ್ನುವುದನ್ನು ನಾವೆಲ್ಲರೂ ತಿಳಿಯಬೇಕು. ಹಳ್ಳಿಗಾಡುಗಳಲ್ಲಿ, ಭೂಮಿಯಲ್ಲಿ ಬೀಜ ನೆಡುವವಳು ಹೆಣ್ಣು, ಕಳೆ ಕೀಳುವವಳು ಹೆಣ್ಣು ಉಳಿಮೆ ಮಾಡತಕ್ಕ ಗಂಡನಿಗೆ ಊಟ (ಬುತ್ತಿ) ತೆಗೆದುಕೊಂಡು ಹೋಗಿ ಊಟ ಮಾಡಿಸುವವಳು ಮತ್ತು ಅವನು ಬದುಕುವುದಕ್ಕೆ ಅವನ ಸಂತೋಷದಲ್ಲಿ, ಕಷ್ಟದಲ್ಲಿ ಭಾಗಿಯಾಗುವವಳು ಹೆಣ್ಣು, ಈ ರೀತಿ ಯಾಗಿ ಅವಳು ಬ್ರನ್ ಸಪ್ಲೈ ಮಾಡುವವಳು ಹೆಣ್ಣು ಎನ್ನುವ ಅರ್ಥದಲ್ಲಿ ನಾನು ಹೇಳಿದೆ. ಅಷ್ಟೆ ಅಲ್ಲ, ತನ್ನನ್ನೆ ತ್ಯಾಗಮಾಡಿಕೊಂಡು ಒಂದು ಮಗುವಿಗೆ ಜನ್ಮ ಕೊಡತಕ್ಕ ತಾಯಿಯು ಟೆಲ್ಲರ್ ಅಲ್ಲವೇ? ಇವಳು ಭೂಮಿಯನ್ನು ಉಳುವುದಕ್ಕೆ ಹೋಗುವುದಿಲ್ಲವೇ? ಈ ದೃಷ್ಟಿಯಿಂದ ಮಾತ್ರ ನಾನು ಹೇಳುತ್ತಿರುವುದೆಂದು ಮಾನ್ಯ ಸಚಿವರು ಅರ್ಥಮಾಡಿಕೊಳ್ಳಬೇಕು. ಮಹಾತ್ಮಗಾಂಧೀಜಿಯವರು ಮೆದುಳು ಎಂದು ಹೇಳಿ, ಸಮಸ್ತ ಜೀವನವನ್ನೇ ಮುಡುಪಾಗಿಡತಕ್ಕ ಹೆಣ್ಣನ್ನು ಡಿಸ್ಕ್ರಿಮಿನೇಟ್ ಮಾಡಲಿಲ್ಲ. ಅದರಂತೆ ನೀವೂ ಇವಳನ್ನು ಡಿಸ್ಕ್ರಿಮಿನೇಟ್ ಮಾಡಬೇಡಿ ಇವಳಿಗೆ ಸರಿಸಮನಾದ ಹಕ್ಕುಭಾಧ್ಯತೆಗಳನ್ನು ಕೊಡಿ ಎನ್ನುವ ದೃಷ್ಟಿಯಿಂದ ಮಾತ್ರ ನಾನು ಇಲ್ಲಿ ಹೇಳಿದ್ದೇನೆ ಎನ್ನುವುದನ್ನು ಮಾನ್ಯ ಸಭೆಯವರು ಗಮನಿಸಬೇಕು ಎಂದು ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಮಾನ್ಯ ಕಂದಾಯಮಂತ್ರಿಗಳು ಕೇಳಿದರು, ರಾಜಾಜಿಯವರು ಹೇಳಿದ್ದನ್ನು ಹೇಳಿದಿರಿ, ಮಾನ್ಯ ಅಂಬೇಡ್ಕರ್ ಅವರು ಹೇಳಿದನ್ನು ಹೇಳಲಿಲ್ಲ ಎಂದು ಡಾಕ್ಟರ್ ಅಂಬೇಡ್ಕರ್ ಅವರು ಸಹ ಲ್ಯಾಂಡ್ ಲೆಜಿಸ್ಲೇಷನ್ ಬಗ್ಗೆ ಒಂದು ಆರ್ಟಿಕಲ್ ಬರೆದಿದ್ದಾರೆ.

Dr.Ambedkar has written a book on 'Title, Status and Minorities' and in it he has stated.

> "Consolidaration of holdings and tenancy legislation are worse than useless. They cannot bring about prosperity in agriculture. Neither consolidation nor tenancy legislation can be of any help to the sixty million untouchables who are just land less labourers. Only collective farms can help them..................... Basic industries must be owned by the State. Agriculture shall be a State industry. Land will belong to the State and shall be let out to villagers without distinction of caste or creed and in such a manner that there will be no landlord, no tenant and no landless labourers."

This is what we expect the Revenue Minister to do.

ಆದ್ದರಿಂದ ಮಾನ್ಯ ಮಂತ್ರಿಗಳು, ಹೆಣ್ಣು ಮಕ್ಕಳಿಗೆ ಮಾತ್ರ ಭೇದ ಭಾವ ಮಾಡಬಾರದು ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಬೇಕಾದರೆ ಎಲ್ಲಾ ಜಮೀನನ್ನು ತೆಗೆದುಕೊಂಡು ಬಿಡಿ, ಸೀಲಿಂಗ್

ಲಿಮಿಟ್ ಇನ್ನೂ ಕೂಡ ಕಡಿಮೆ ಮಾಡಿ. ಆದರೆ ಡಾಕ್ಟರ್ ಅಂಬೇಡ್ಕರ್ ಅವರು ಮಹಾತ್ಮಾಗಾಂಧಿಯವರು ಹೇಳಿದಹಾಗೆ, ಮಾತ್ರ ಮಾಡಬೇಕು ಎಂದು ನಾನು ಹೇಳುತ್ತೇನೆ. ಕಾನೂನು ಬದ್ಧವಾಗಿ, ರಾಜ್ಯಾಂಗದ ಪ್ರಕಾರ ಇವರಿಗೆ ಯಾವರೀತಿಯು ಹಕ್ಕು ಇದೆ, ಅದನ್ನು ರಕ್ಷಣೆಮಾಡಬೇಕು. ಇವರಿಗೆ ಈಗ ಆಗಿರತಕ್ಕಭೇದಭಾವವನ್ನು ಮಾತ್ರ ತೆಗೆದುಹಾಕಿ ಎಂದು ನಾನು ಹೇಳುತ್ತೇನೆ. ಈ ತಿದ್ದುಪಡಿಯಲ್ಲಿ ಹೆಣ್ಣು ಮಕ್ಕಳಿಗೆ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸಿ ಮುಂದಿನ ಕ್ರಮ ತಗೆದುಕೊಳ್ಳಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ತಿದ್ದುಪಡಿಗಳ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ.

ಸೆಕ್ಷನ್–೬' ಇದರಲ್ಲಿ ಏನು ಇದೆ ಎನ್ನುವುದು ನನಗರ್ಥವಾಗುವುದಿಲ್ಲ.

"6. **AMEMDMENT OF SECTION 22.**—In section 22 of the principal Act, in clause (e) of sub-section (1), the words 'or allied pursuits' shall be omitted.

ಇದರ ಉದ್ದೇಶ ವೇನೆಂಬ ಆಜ್ಜೆಕ್ಟ ಬಗ್ಗ ಅಂಡ್ ರೀಸನ್ಸ್‌ನಲ್ಲಿ ಎಲ್ಲಿಯೂ ತಾವು ಉಲ್ಲೇಖ ಮಾಡಿಲ್ಲ. ಇದನ್ನು ತೆಗೆದುಹಾಕುವುದಕ್ಕೆ ಕಾರಣ ಏನು ? ಇದರ ಬಗ್ಗೆ ವಿವರಣೆ ಕೊಬೇಕಾದ್ದು ಅಗತ್ಯ.

ಅದೇ ರೀತಿಯಲ್ಲಿ ಸೆಕ್ಷನ್—೭ ಈ ಬಗ್ಗೆ ಹೆಳಬೇಕೆಂದರೆ, ಮಾನ್ಯ ಕಂದಾಯ ಮಂತ್ರಿಗಳು ಅಡ್ವೊಕೇಟ್ ಆಗಿದ್ದವರು, ಅವರಿಗೆ ಕಾನೂನು ವಿಚಾರ ಚೆನ್ನಾಗಿ ಗೊತ್ತಿದೆ ಎಂದು ನಾನು ಅಂದುಕೊಂಡಿದ್ದೇನೆ. ಇದರ ಬಗ್ಗೆ ಮಾನ್ಯ ಸಚಿವರು ಕಾನೂನು ಇಲಾಖೆಯಿಂದ ಏನಾದರೂ ಒಪಿನಿಯನ್ ತೆಗೆದುಕೊಂಡಿದ್ದಾರೆಯೇ ? ಲ್ಯಾಂಡ್‌ರಿಫಾರಂಸ್ ಅಕ್ಟನಲ್ಲಿ, ಇದನ್ನು ತರುವುದಕ್ಕೆ ಅವರು ಹೇಗೆ ಅನುವು ಮಾಡಿಕೊಟ್ಟರು ಎನ್ನುವ ಪ್ರಶ್ನೆಯನ್ನು ನಾನು ಮಾನ್ಯ ಮಂತ್ರಿಗಳಿಗೆ ಹಾಕುತ್ತೇನೆ. ರಾಜ್ಯಾಂಗದ ೭ನೇ ಷೆಡ್ಯೂಲ್‌ನಲ್ಲಿ, ಸ್ಟೇಟ್‌ಲಿಸ್ಟ ಐಟಂ ನಂಬರ್ ೧೮ರಲ್ಲಿ ಲ್ಯಾಂಡ್ ಬಗ್ಗೆ ಹೇಳಿದೆ; ಇಲ್ಲಿ ನಮಗ ಲಾಂಡ್ ಇನ್‌ಕ್ಲೂಡ್ಸ್ ಬಿಲ್ಡಿಂಗ್ ಎನ್ನುವುದರ ಬಗ್ಗ ಜಿಜ್ಞಾಸೆ ಇದೆ. ಇದರ ಬಗ್ಗೆ ಕೆಲವರು ಸುಪ್ರೀಂಕೋರ್ಟ್‌ನವರೆಗ ಹೋಗಿ, ಲ್ಯಾಂಡ್ ಡಸ್‌ನಾಟ್ ಇನ್‌ಕ್ಲೂಡ್ ಬಿಲ್ಡಿಂಗ್, ಎಂದು ತೀರ್ಪನ್ನು ಪಡೆದುಕೊಂಡು ಬಂದಿದ್ದಾರೆ. ಆರ್ಟಿಕಲ್ ೧೪೧ರ ಪ್ರಕಾರ, ಒಮ್ಮೆ ಸುಪ್ರೀಂಕೋರ್ಟ ತೀರ್ಪು ಕೊಟ್ಟಾಗಾ ಅದು ಎಲ್ಲಾ ಕೊರ್ಟುಗಳಿಗೂ ಅನ್ವಯವಾಗುತ್ತದೆ ಎನ್ನುವುದೂ ತಮಗೆ ಗೊತ್ತಿದೆ. ತಮ್ಮ ತಿದ್ದುಪಡಿ ಕಾನೂನಿನಲ್ಲಿ ಸೆಕ್ಷನ್ ೩೮ರಲ್ಲಿ ಡ್ವೆಲ್ಲಿಂಗ್ ಆಫ್ ಹೌಸಸ್ ಆಫ್ ಅಗ್ರಿಕಲ್ಚರ್ ಲೆಬರರ್ಸ್ ಎಕ್ಸೆಟ್ರಾ ದಲ್ಲಿ, ಭೂಮಿ ಉಳುಮೆ ಮಾಡತಕ್ಕವರನ್ನು ಇಲ್ಲಿ ಸೇರಿಸುವುದಕ್ಕೆ ಅಧಿಕಾರವಿಲ್ಲ; ಎನ್ನವುದನ್ನು ಮಾತ್ರ ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಅಂದ ಮಾತ್ರಕ್ಕೆ ಅಗ್ರಿಕಲ್ಚರಲ್ ಲೇಬರರ್ಸ್‌ಗ ನಾನು ವಿರೋಧೆ ವಾಗಿದ್ದೇನೆ ಎಂದು ಯಾರು ಭಾವಿಸಿಕೊಳ್ಳಬಾರದು. ಅದನ್ನು ಲ್ಯಾಂಡ್‌ರಿಫಾರಂಸ್ ಆಕ್ಟನಲ್ಲಿ ತರುವುದಕ್ಕೆ ಅವಕಾಶವಿಲ್ಲ. ಇದು ಕರೆಂಟ್ ಲಿಸ್ಟ್‌ನಲ್ಲಿ ಬರುತ್ತದೆ. ಸ್ಟೇಟ್ ಲಿಸ್ಟಿನಲ್ಲಿ ಇದು ಬರುವುದಿಲ್ಲ ಎಂದು ಸುಪ್ರೀಂಕೋರ್ಟಿನವರು ತೀರ್ಪು ಕೊಟ್ಟಿದ್ದಾರೆ. ಆದ್ದರಿಂದ ನಿಮಗೆ ಯಾವುದನ್ನು ಮಾಡುವುದಕ್ಕೆ ಅಧಿಕಾರವಿಲ್ಲವೋ ಅದನ್ನು ಈ ತಿದ್ದುಪಡಿಯಲ್ಲಿ ಸೇರಿಸಿಕೊಂಡು ಇಲ್ಲಿ ತರುವುದಕ್ಕೆ ಹೊರಟಿರುವುದು ಸರಿಯಲ್ಲ ಮತ್ತು ತಾವು ಇದರ ಬಗ್ಗೆ ಹೇಳುವುದೂ ಉಚಿತವಲ್ಲ. ತಾವು ಇದನ್ನು ಸೇರಿಸಿಕೊಂಡು ಮಾಡಿದ್ದೆ ಆದರೆ, ಇದರಿಂದ ತೊಂದರೆಯಾದವರು ಕೋರ್ಟಿಗೆ ಹೋಗುತ್ತಾರೆ, ಮತ್ತು ಕೋರ್ಟಿನವರು ತೀರ್ಮಾನವನ್ನು ತಮ್ಮ ವಿರುದ್ಧವಾಗಿ ಕೊಡಬೇಕಾಗುತ್ತದೆ, ಆದ್ದರಿಂದ ಕ್ಲಾಸ್ ೭ ನಲ್ಲಿ ತಾವು ತಂದಿರತಕ್ಕದ್ದು ಸೂಕ್ತವಲ್ಲ ಎನ್ನುವುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಇದನ್ನು ಇಲ್ಲಿತರುವುದಕ್ಕೆ ನಮಗೆ ಅಧಿಕಾರವೆ ಇಲ್ಲ, ಆದ್ದರಿಂದ ತಾವು ಇದನ್ನು ಈ ಸಂದರ್ಭದಲ್ಲಿ ಕೈ ಬಿಡುವುದು ಸೂಕ್ತ ಎಂದು ನಾನು ತಮಲ್ಲಿ ಭಿನ್ನವಿಸಿಕೊಳ್ಳುತ್ತೇನೆ.

ಇನ್ನು ಕ್ಲಾಸ್ ೮ ರಲ್ಲಿ ಸೆಕ್ಷನ್ ೪೦ ಕ್ಕೆ ತಿದ್ದುಪಡಿ ತಂದಿದ್ದೀರಿ. ಇದರಲ್ಲಿ ಹೇಳುತ್ತಿರಿ :

"Lawfully subsisting, the amount of compensation shall be applied first for discharging such mortgage or other encumbrance and the balance, if any, shall be paid to the tenant" ಎಂದು.

5-00 P. M.

ಗಂಡ ಸಾಯುವಾಗ ಮಹಿಳೆಯರಿಗೆ ಜೀವನಾಂಶದ ಹಕ್ಕು, ಮೆಯಿಂಟೆನೆನ್ಸ್ ಚಾರ್ಜ್ ಎಂದು ಕ್ರಿಯೇಟ್ ಮಾಡಿರುತ್ತಾರೆ. ಈಗ ಅಂಥವರಿಗೆ ತಾವು ಏನು ಪರಿಹಾರ ಮಾಡಿಕೊಡುತ್ತೀರಿ ? The charge would have been created by the Courr. A charge runs with the land and not with the person, either tenant or landlord. But, ಅಲ್ಲಿರತಕ್ಕವನಿಗೆ ಸಂಬಂಧವಿರುವುದಿಲ್ಲ. ಜೀವನಾಂಶದ ಹಕ್ಕು ಜಮೀನಿನ ಜೊತೆಯಲ್ಲಿ ಹೋಗುತ್ತದೆ. ಈಗ ಜೀವನಾಂಶದ ಹಕ್ಕು ದೊರೆಯದಿದ್ದವರಿಗೆ ಏನು ಪರಿಹಾರ ಕೊಡುತ್ತೀರಿ ಎಂದು ಕೇಳಬಯಸುತ್ತೇನೆ. ಒಂದು ವೇಳೆ ಅವರಿಗೇನಾದರೂ ಪರಿಹಾರ ಕೊಡದಿದ್ದರೆ ಅವರ ಗತಿ ಏನಾಗಬೇಕು ? ಗಂಡ ಸತ್ತ ಬಳಿಕ ಅದು ಕೋರ್ಟ್ ಮುಖಾಂತರ ತೀರ್ಮಾನವಾಗಿರುತ್ತದೆ. Because it is a charge run with the land, under the Transfer of Properties Act it must run concurrently ಟೆನ್‌ಂಟಿಗೆ ಜಮೀನನ್ನು ಬಿಡಿಸಿಕೊಟ್ಟಾಗ ಜಮೀನ್ದಾರರಿಗೆ ಪರಿಹಾರ ಕೊಡಬೇಕಾಗುತ್ತದೆ. ಅದೇ ರೀತಿ ಮಹಿಳೆಯರಿಗೆ ಭೂಮಿಯ ಬಗ್ಗೆ ಜೀವನಾಂಶದ ಹಕ್ಕಿರುವಾಗ ಮತ್ತು ಕೋರ್ಟಿನಲ್ಲಿ ಗಂಡ ಸತ್ತ ಬಳಿಕ ಚಾರ್ಜ್ ಕ್ರಿಯೇಟ್ ಆಗಿರುವಾಗ ಅವರಿಗೂ ಕೂಡ ಪರಿಹಾರವನ್ನು ಕೊಡಲೇ ಬೇಕಾಗುತ್ತದೆ. ಗಂಡ ಸತ್ತಿರುತ್ತಾನೆ, ಜಮೀನೂ ಇಲ್ಲ, ಜೀವನಾಂಶವೂ ಇಲ್ಲ ಎಂದರೆ ಆಕೆಯ ಗತಿ ಏನಾಗಬೇಕು ? ನಾಳೆಯ ದಿವಸ ಆಕೆಯನ್ನು ನಿಮ್ಮ ಮನೆಯ ಮುಂದೆ ತಂದು ನಿಲ್ಲಿಸಬೇಕಾಗುತ್ತದೆ. ಅದ್ದರಿಂದ, ಈ ಬಗ್ಗೆ ತೀವ್ರವಾಗಿ ಆಲೋಚಿಸಿ ಕ್ಲಾಸ್ ೮ ರಲ್ಲಿ ಸೂಕ್ತವಾದ ತಿದ್ದುಪಡಿಯನ್ನು ತಂದು ಅಂಥ ಮಹಿಳೆಯರಿಗೆ ಪರಿಹಾರವನ್ನು ಕೂಡಲೇ ಕೊಡತಕ್ಕ ಒಂದು ಅಂಶವನ್ನು ಅಳವಡಿಸಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಕ್ಲಾಸ್ ೯ ರಲ್ಲಿ ಆರ್ಟಿಸಾನ್ ಅನ್ನು ಒಮಿಟ್ ಮಾಡಲಾಗಿದೆ.; ಅದು ಏಕೆ ಎಂದು ನನಗೆ ತಿಳಿಯಲಿಲ್ಲ. ಇನ್ನು ಸೆಕ್ಷನ್ ೪೮ ಕ್ಕೆ ತಿದ್ದುಪಡಿಯನ್ನು ತಂದಿರುವುದರ ಬಗ್ಗೆ ಮಾನ್ಯ ಶೀರ್ನಾಳಿ ಚಂದ್ರಶೇಖರ್‌ರವರು ಏನು ಹೇಳಿದ್ದಾರೆ, ಅದನ್ನು ನಾನು ಚೆನ್ನಾಗಿ ಓದಿದ್ದೇನೆ. ಮತ್ತು ಆ ಬಗ್ಗೆ ನಾನು ಹೇಳುವುದೇನೆಂದರೆ. ಶಾಸಕರನ್ನು ಲ್ಯಾಂಡ್ ಟ್ರಿಬ್ಯುನಲ್‌ಗಳಲ್ಲಿ ಸದಸ್ಯರನ್ನಾಗಿ ಮಾಡುವುದು ತಪ್ಪು ಎಂದು ನನ್ನ ವೈಯುಕ್ತಿಕ ಅಭಿಪ್ರಾಯ ಕಾರಣವೇನೆಂದರೆ, ರಾಜ್ಯಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಈ ಮೂರೂ ಬೇರೆ ಬೇರೆ ವಿಧದಲ್ಲಿ ಕೆಲಸ ಮಾಡಬೇಕಾಗುತ್ತದೆ. ಇಲ್ಲಿ ಕಾನೂನನ್ನು ಮಾಡತಕ್ಕವರು ನಾವೇ ಮತ್ತು ಕಾರ್ಯಾಂಗದ ಮುಖಾಂತರ ಎಕ್ಸಿಕ್ಯೂಟ್ ಮಾಡತಕ್ಕವರು ನಾವೇ ಅಗುವುದೆಂದರೆ ಯಾವ ನ್ಯಾಯ ? ಹೀಗೆಯೇ ಲ್ಯಾಂಟ್ ಟ್ರಿಬ್ಯುನಲ್‌ನಲ್ಲಿ ಶಾಸಕರೇ ಜಡ್ಜ್ ಆಗುತ್ತಾರೆಂದರೆ ಈ ಸಂದರ್ಭದಲ್ಲಿ ಒಬ್ಬ ದೊಡ್ಡ ಮೇಧಾವಿ ಹೇಳಿದ ಮಾತು ನೆನಪಾಗತ್ತದೆ. ಅದೇನೆಂದರೆ, 'A monkey cannot be a judge in its own forest' ಎಂದು ಅಂದರೆ. ಕೋತಿ ತನ್ನ ಕಾಡಿನಲ್ಲಿ ತಾನೇ ಜಡ್ಜ್ ಆಗಬಾರದೆಂದು ಆ ಮೇಧಾವಿ ಹೇಳಿದ್ದಾನೆ. ನಾವೇ ಶಾಸನ ಮಾಡಿರುವುದರಿಂದ ನಮ್ಮ ಶಾಸನ ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಅಲ್ಲಿ ಎಕ್ಸಿಕ್ಯೂಟ್ ಮಾಡುವುದಕ್ಕೆ, ಕೆಲಸ ಇಲ್ಲದೆ ಇರುವವರು ಬೇಕಾದಷ್ಟು ಮಂದಿ ಇದ್ದಾರೆ, ಅವರನ್ನು ಕಳುಹಿಸಿಕೊಡಿ, ಅವರುಗಳನ್ನು ಅಸಿಸ್ಟೆಂಟ್ ಕಮಿಷನರ್‌ರವರ ಸಹಾಯವನ್ನು ಪಡೆದುಕೊಂಡು ಕೆಲಸ ಮಾಡುತ್ತಾರೆ. ಅವರುಗಳು ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಕಂಪ್ಲೀಟ್ ಆಗಿ ಎಕ್ಸಿಕ್ಯೂಟ್ ಮಾಡುವುದರಿಂದ ಕೆಲಸವೂ ಚನ್ನಾಗಿ ನಡೆಯ ಬಹುದು ಮತ್ತು ಅದರಿಂದ ಜನಗಳಿಗೂ ಅನುಕೂಲವಾಗಬಹುದು. ಆದ್ದರಿಂದ, ಮಾನ್ಯ ಮಂತ್ರಿಗಳು ಈ ಬಗ್ಗೆ ಗಮನ ಹರಿಸಬೇಕೆಂದು ಹೇಳುತ್ತೇನೆ. ಒರಿಜಿನಲ್ ಆಕ್ಟಿನ ಕ್ಲಾಸ್ ೧೨ ರ ಸೆಕ್ಷನ್ ೪೮ ರಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರು ಕೂಡ ಮೆಂಬರ್ಸ್ ಆಗುವರು ಎಂದು ಹೇಳಲಾಗಿದೆ. ಅದರೆ ಆ ವಿಚಾರ ಈ ಅಮೆಂಡ್‌ಮೆಂಟ್‌ನಲ್ಲಿ ಇಲ್ಲ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಸಲಹೆ ಮಾಡುವುದೇನೆಂದರೆ, ಷೆಡ್ಯೂಲ್ಡ್ ಕ್ಯಾಸ್ಟ್ ಅಂಡ್ ಷೆಡೂಲ್ಡ್ ಟ್ರೈಬ್ಸ್ ಮೆಂಬರ್ಸ್‌ನ್ನು ಹಾಕುವುದರ ಜೊತೆಗೆ ಮಹಿಳೆಯರನ್ನು ಕೂಡ ಅಲ್ಲಿ ಸದಸ್ಯರನ್ನಾಗಿ ಹಾಕಿ ಅವರಿಗೂಕೂಡ ನ್ಯಾಯವನ್ನು ದೊರಕಿಸಿಕೊಡಬೇಕೆಂದು ಹೇಳುತ್ತೇನೆ. ಎಕೆಂದರೆ ಅಲ್ಲಿ ಅವರಿಗೆ ಸರಿಯಾಗಿ ನ್ಯಾಯ ದೊರಕುತ್ತಿಲ್ಲವೆಂಬ ದೂರು ಕೇಳಿಬರುತ್ತಿದೆ. ಇನ್ನು ಸೆಕ್ಷನ್ ೪೮ (೫) (ಎ) ನಲ್ಲಿ ಈ ರೀತಿ ಹೇಳಿದೆ.—

"The Deputy Commissioner may, if he deems it expedient so to do, for ends of justice, transfer any application or other preceedings relating there to pending before any Tribunal to any other Tribunal within his jurisdication"

ಎಂದು; ಇದರಲ್ಲಿ either on an application or *suo motu* ಎಂದು ಸೇರಿಸುವುದು ನ್ಯಾಯವೆಂದು ಅಂದು ಕೊಂಡಿದ್ದೇನೆ. ಇಲ್ಲದಿದ್ದರೆ ಅಪ್ಲಿಕೇಶನ್ ಹಾಕುವುದಕ್ಕೆ ಆಗುವುದಿಲ್ಲ. ಇನ್ನು ಸೆಕ್ಷನ್ ೧೨೨ (ಎ) ನಲ್ಲಿ ಏನು ತಂದಿದ್ದೀರಿ ಅದನ್ನು ಸೆಕ್ಷನ್ ೫ (ಎ) ನಲ್ಲಿ ತರುವುದು ಒಳ್ಳೆಯದು. ಅದ್ದರಿಂದ ಸದಸ್ಯರಿಗೆ ಅಪ್ಲಿಕೇಷನ್ ಹಾಕುವುದಕ್ಕೆ ಅನುಕೂಲವಾಗುತ್ತದೆ. ಅದ್ದರಿಂದ ಸೆಕ್ಷನ್ ೫ (ಎ) ನಲ್ಲಿ ಸೂವೋ ಮೋಟೊ ಎಂಬ ಪದವನ್ನು ಸೇರಿಸಬೇಕಾಗುತ್ತದೆ. ಇನ್ನು ಕ್ಲಾಸ್ ೧೨ ಸೆಕ್ಷನ್ ೪೮ (ಎ) ನಲ್ಲಿ powers increased three month from the date of this Act ಎಂದು ಹೇಳಿದ್ದಾರೆ. ಇದು ಬಹಳ ಗಹನವಾದ ಸೆಕ್ಷನ್ ಇವತ್ತಿನವರೆಗೆ ಡಿಷಿಷನ್ ಆಗಿರತಕ್ಕ ಎಲ್ಲ ನಿರ್ಣಯಗಳನ್ನು ಕೂಡ ರೆವ್ಯೂ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕಾಗುತ್ತದೆ. ಅಲ್ಲಿ ಇನ್ನೂ ಸಾವಿರಾರು ಕೇಸ್‌ಗಳು ಬರುವುದಕ್ಕೆ ಆವಕಾಶ ಇರುವುದರಿಂದ ಅಲ್ಲಿ ಇದಕ್ಕೆ ಒಂದು ಲಿಮಿಟ್ ಇಡಬೇಕು.

SRI B. BASAVALINGAPPA.—It refers only fo section 67.

ಶ್ರೀಮತಿ ಎಸ್ ಪ್ರಮೀಳ.—ಇದು ಸಫಿಷಿಯಂಟ್ ಕಾಸ್ ಎಂದು ಹೇಳುತ್ತಿರಿ. what is the sufficient cause ಎಂದು ಹೇಳಲಿಲ್ಲ. Anything may be a sufficient cause! ಅದರಿಂದ, ಯಾವ ರೀತಿಯಲ್ಲಿ ಸಫಿಷಿಯಂಟ್ ಕಾಸ್ ಅಗುತ್ತದೆ. ಅದರ ಬಗ್ಗೆ ಸ್ವಲ್ಪ ಗೈಡ್‌ಲೈನ್ಸ್ ಕೊಡಬೇಕಾಗುತ್ತದೆ; ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಇನ್ನು ಒಂದು ಬಹಳ ದುಃಖಕರವಾದ ಸಂಗತಿ ಎಂದರೆ ಕ್ಲಾಸ್ ೧೫ ಪ್ರಾವಿಸೋ (೧) ರಲ್ಲಿ ಈ ರೀತಿ ಹೇಳಿದ್ದೀರಿ.—

"Provided further that the amount so payable shall be paid.

(i) in the case of a minor, a woman who has never been married, ." ಎಂದು;

ಇಲ್ಲಿ ಏಕೆ ಈ ರೀತಿ ಹೇಳಿದ್ದೀರಿ ಮತ್ತು ಇಲ್ಲಿ ನಿಮ್ಮ ದೃಷ್ಟಿಕೋನ ಏನು ಎಂಬುದು ಅರ್ಥವಾಗುತ್ತಿಲ್ಲ. ಇಲ್ಲಿ who is not married as on 1st March 1974 ಎಂದು ಅಗಬೇಕು, ಇಲ್ಲದಿದ್ದರೆ ಕಾಂಪೆನ್ಸೇಷನ್ ಕೊಡುವುದಿಲ್ಲವೆಂದು ಮೊದಲೇ ಇತ್ತು. ಇದು ನಿಮ್ಮ ದೃಷ್ಟಿಕೋನ ಆಗಬಾರದೆಂದು ಹೇಳುತ್ತೇನೆ. ನಿಮ್ಮ ದೃಷ್ಟಿಕೋನ ಈ ರೀತಿ ಆದರೆ ಕಾಂಪನ್ಸೇಷನ್ ಕೊಡುವುದಿಲ್ಲವೆಂದು ಮದುವೆಯಾಗದ ಪರಿಸ್ಥಿತಿ ಬರುತ್ತದೆ. ಅದು ನಿಮ್ಮ ಉದ್ದೇಶ ಅಲ್ಲವೆಂದು ನಾನು ಅಂದು ಕೊಂಡಿದ್ದೇನೆ. ಅದ್ದರಿಂದ ದಯವಿಟ್ಟು ಇದನ್ನು ತೆಗೆದು ಹಾಕಬೇಕೆಂದು ಹೇಳುತ್ತೇನೆ. ಇನ್ನು ಕ್ಲಾಸ್ ೧೬ ರಲ್ಲಿ ಸೆಕ್ಷನ್ ೫೩ ಕ್ಕೆ ಅಮೆಂಡ್‌ಮೆಂಟ್ ತಂದಿದ್ದೀರಿ. ಇದರ ಸಬ್‌ಸೆಕ್ಷನ್ (ಬಿ) ನಲ್ಲಿ ಪುಟ ೨೭–೨೮ ರಲ್ಲಿ ಕೊಟ್ಟಿಹಾಗೆ ೫೧ ಎಂದು ಹೇಳುತ್ತೀರಿ, ಪ್ರಿಂಟ್ ಕೂಡ ಮಾಡಿದ್ದೀರಿ. ನೀವು ಏನನ್ನೋ ಮಾಡುವುದಕ್ಕೆ ಹೋದರೆ ಅದರಿಂದ ಬಹಳ ಕಷ್ಟವಾಗುತ್ತದೆ. ಅಲ್ಲಿ ಒರಿಜಿನಲ್ ಸೆಕ್ಷನ್ ಅನ್ನು ಹಾಕಿಲ್ಲ ಯಾವುದನ್ನು ತರಬೇಕೆಂಬ ಬಗ್ಗೆ ಗೊತ್ತಾಗುವುದಿಲ್ಲ. ಅದ್ದರಿಂದ ಇದನ್ನು ತಾವು ಸ್ವಲ್ಪ ನೋಡಿ ಹೇಳಬೇಕು. ಇದು ನನ್ನ ದೃಷ್ಟಿಕೋನ ಮಾತ್ರವಲ್ಲ, ಇದನ್ನು ಸಮಗ್ರವಾಗಿ ಓದತಕ್ಕವರೆಲ್ಲರ ದೃಷ್ಟಿಕೋನವು ಆಗಿದೆ. ಇನ್ನು ಕ್ಲಾಸ್ ೧೯ ರಲ್ಲಿ ತಾವು No amount shall be payable in respect of such land ಎಂದು ಹೇಳಿದ್ದಿರಿ. ಇದು ಏತಕ್ಕೆ ಎಂದು ಕೇಳುತ್ತೇನೆ. Amendment of Section ೫೮ ನಲ್ಲಿ ಯಾವ ಕಾರಣಕ್ಕಾಗಿ no amount shall be payable ಎಂದು ಹೇಳುತ್ತಿರಿ. ಅವರು ಮಾಡಿದ ತಪ್ಪಾದರೂ ಏನು ? ೧೯೭೪ ರಲ್ಲಿ ಕೊಡುತ್ತೇವೆಂದು ಹೇಳಿದ್ದೀರಿ, ಅದರೆ ಇವತ್ತು ಕೊಡವುದಿಲ್ಲವೆಂದು ಹೇಳುತ್ತಿದ್ದೀರಿ. ಇದಕ್ಕೆ ಕಾರಣವೇನು ? ಅಬ್‌ಜೆಕ್ಟ್‌ನಲ್ಲಿ ಏನನ್ನು ಹೇಳದೆ ತೆಗೆದು ಹಾಕುವುದಕ್ಕೆ ಕಾರಣವೇನು ಎಂದು ಕೇಳುತ್ತೇನೆ. ಹೀಗೆ ಮಾಡಿರುವುದರಿಂದ you are depriving them of their food. ಇದರಿಂದ ಅವರಿಗೆ ಇವತ್ತಿನ ದಿವಸ ಬಹಳ ಕಷ್ಟವಾಗುತ್ತದೆ. ಆದಕಾರಣ ಅದರ ಬಗ್ಗೆ ಆಬ್‌ಜೆಕ್ಟ್ಸ್ ಅನ್ನು ತಿಳಿಸಬೇಕು. ಇನ್ನು ಕ್ಲಾಸ್ ೨೦ ರಲ್ಲಿ ಸೆಕ್ಷನ್ ೬೧ ಕ್ಕೆ ಏನು ಅಮೆಂಡ್‌ಮೆಂಟ್ ತಂದಿದ್ದೀರಿ ಅದು ಬಹಳ ಒಳ್ಳೆಯದು. ಅದರಲ್ಲಿ ೧೫ ವರ್ಷ ಎಂದು ಏನು ಮಾಡಿದ್ದೀರಿ ಅದನ್ನು ನಾನು ಸ್ವಾಗತಿಸುತ್ತೇನೆ. ಇನ್ನು ಸೆಕ್ಷನ್ ೧೨೫ ರಲ್ಲಿ ಏನು ಪನಿಷ್‌ಮೆಂಟ್ ಬಗ್ಗೆ ಹೇಳಿದ್ದೀರಿ ಅದನ್ನು ಸೆಕ್ಷನ್ ೬೧ ಕ್ಕೆ ಸೇರಿಸ ಬೇಕೆಂದು ಹೇಳುತ್ತೇನೆ. ಅದರಲ್ಲಿ ಏನು ೫೦೦ ರೂಪಾಯಿ ದಂಡವನ್ನು ವಿಧಿಸಲಾಗುವುದು ಎಂದು ಮಾಡಿದ್ದೀರಿ; ಅದು ತಪ್ಪು ಮಾಡಿದವರೆಲ್ಲರಿಗೂ ಅನ್ವಯವಾಗುತ್ತದೆ. Any offence shall be a cognisable offence. ಅದರೆ ಸೆಕ್ಷನ್ ೬೧ ರ ಪ್ರಕಾರ ಯಾರು ಗೇಣೀದಾರ ಎಂದು ಅಪ್ಲಿ

ಕೇಷನ್ ಹಾಕಿ, ನಂತರ ಗೇಣೀದಾರ ಎಂದು ಬರೆಸಿಕೊಂಡು ತನ್ನ ಹೆಸರಿಗೆ ಜಮೀನನ್ನು ರಿಜಿಸ್ಟರ್ ಮಾಡಿಸಿಕೊಂಡಿರುತ್ತಾರೆ, ಅಂಥವರು ಕಾನೂನು ಗೊತ್ತಿದ್ದು ೧೫ ವರ್ಷ ಮಾರಬಾರದು ಎಂದು ತಿಳಿದಿದ್ದರೂ, ಕೂಡ ಮಾರಿದರೆ ಅಂಥವರಿಗೆ ಶಿಕ್ಷೆ ಕೊಡುವುದಿಲ್ಲವೇ ? ***

ಶ್ರೀ ಡಿ. ಟಿ. ರಾಮು. — ಮಾನ್ಯ ಅಧ್ಯಕ್ಷರೇ ನಾನು ಕ್ರಿಯಾಲೋಪ ಎತ್ತುತ್ತಿದ್ದೇನೆ,**

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ. — ಮಾನ್ಯ ಅಧ್ಯಕ್ಷರೇ, ಹಿಂದೆ ಕೆಲವು ರೂಲಿಂಗ್‌ಗಳನ್ನು ಈ ಬಗ್ಗೆ ಕೊಡಲಾಗಿದೆ. ಯಾವುದೇ ಸಧಸ್ಯರು ಮತ್ತೊಬ್ಬ ಸದಸ್ಯರ ಮೇಲೆ ಅಪಾದನೆಯನ್ನು ಮಾಡಬೇಕಾದರೆ ಮೊದಲು ನೋಟಿಸ್ ಕೊಟ್ಟು ಮಾಡಬೇಕು, ಸುಮ್ಮನೆ ಸುಮ್ಮನೆ ಹಾಗೇಯೇ ಯಾರ ಮೇಲೂ ಅಪಾದನೆಗಳನ್ನು ಮಾಡಬಾರದು ಎಂದು ರೂಲಿಂಗ್ ಕೊಡಲಾಗಿದೆ. ಆದರೆ ಇವರು ನೋಟಿಸ್ ಕೊಡದೇ ಹಾಗೆಯೇ ಆಪಾದನೆ ಮಾಡಿದ್ದರಿಂದ ಅವರು ಏನು ಅಪಾದನೆಗಳನ್ನು ಮಾಡಿ ಮಾತುಗಳನ್ನಾಡಿದ್ದಾರೆ ಅವನ್ನು ದಾಖಲೆಯಿಂದ ತೆಗೆದು ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

MADAM DEPUTY SPEAKER. — The hon. member Smt. Pramila need not bring that point now. She will have to give notice and when permitted see may discuss about it. Whatever th.t has heen said by the hon. member about the Hon' ble Minister for Law may be expunged.

ಶ್ರೀಮತಿ ಎಸ್. ಪ್ರಮಿಳಾ. — ಮಾನ್ಯ ಸಭಾಧ್ಯಕ್ಷಿಣಿಯವರೇ, ನಾನು ಯಾವುದೇ ದುರದ್ದೇಶದಿಂದ ಇದನ್ನು ಹೇಳುತ್ತಿಲ್ಲ. ಸೆಕ್ಷನ್ ೬೧ ಕ್ಕೆ ಅಮೆಂಡ್‌ಮೆಂಡ್ ತಂದಾಗ ಯಾವರೀತಿ ಅದರ ದುರುಪಯೋಗ ಅಗಬಹುದು ಎಂದು ಹೇಳಿ ಈಗ ದುರುಪಯೋಗವಾಗಿರತಕ್ಕ ಉದಾಹರಣೆಯನ್ನು ಮಾತ್ರ ಕೊಟ್ಟದ್ದೇನೆಯೇ ಹೊರತು ಯಾವುದೇ ಒಬ್ಬ ವ್ಯಕ್ತಿಯ ಬಗ್ಗೆ ದುರುದ್ದೇಶದಿಂದ ಹೇಳಲಿಲ್ಲ. ಮಾನ್ಯ ಸದಸ್ಯರು ನೋಟಿಸ್ ಕೊಡಬೇಕು ಎಂದು ಹೇಳಿದರು. ಅವರಿಗೆ ನಾನು ಚಿರಋಣಿಯಾಗಿದ್ದೇನೆ. ಇದರ ಬಗ್ಗೆ ಒಂದು ಸಬ್ಜೆಕ್ಟ್ ಸಭೆಯ ಮುಂದೆ ತರೋಣ. ಆದರೆ ನಾನು ಏನು ಹೇಳುತ್ತಿದ್ದೇನೆ ಎಂದರೆ, ಸೆಕ್ಷನ್ ೬೧ ಕ್ಕೆ ತಿದ್ದುಪಡಿ ತರಬೇಕಾಗಿದೆ. ಸೆಕ್ಷನ್ ೮೫ ಮತ್ತು ೧೨೫ ರಲ್ಲೂ ಅಮೆಂಡ್‌ಮೆಂಟ್ ಮಾಡಬೇಕಾಗಿದೆ. ಎಂಬುದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಕ್ಲಾಸ್ ೨೧ ರಲ್ಲಿ

"Amendment Section 72.- In section 72 of the principal Act, sub-section (6) shall be omitted."

ಎಂದು ಹೇಳಿದ್ದೀರಿ. ಇಲ್ಲಿ ಯಾತಕ್ಕೆ ಒಮಿಟ್ ಮಾಡಿದ್ದೀರಿ ಎಂದು ನಾನು ತಮ್ಮನ್ನು ಕೇಳುತ್ತಿದ್ದೇನೆ. ಪುಟ ೩೧ ರಲ್ಲಿ ಅಮೆಂಡ್‌ಮೆಂಟ್ ೭೨ ರಲ್ಲಿ ಸಬ್‌ಸೆಕ್ಷನ್ ೬ ರಲ್ಲಿ ಈ ರೀತಿ ಹೇಳಿದ್ದೀರಿ.

> "(6) Where by opertaion of sub-section (10) of Section 63 a person whose holding on the date of commencement of the Amendment Act is within the ceiling area is required to surrender lands under his personal cultivation, compensation shall be paid at the market value." ಎಂದು;

ಅಂದರೆ ಈ ೭೨ನೇ ಸೆಕ್ಷನ್‌ನಲ್ಲಿ ಸಬ್ ಸೆಕ್ಷನ್ ೬ನ್ನು ಒಮಿಟ್ ಮಾಡಿದ್ದೇವೆ ಎಂದು ಹೇಳಿದ್ದೀರಿ. ಮುಂದೆ ಇದರಿಂದೇನಾಗುತ್ತದೆ ಎಂದರೆ, ಯಾರಾದರೂ ಜಮೀನಿದ್ದವರೂ ಕೂಡ ಸರ್ಕಾರಕ್ಕೆ ಭೂಮಿಯನ್ನು ಸೆರಂಡರ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದುವರಗೆ ಸೆರೆಂಡರ್ ಮಾಡಿ ಕಾಂಪೆನ್‌ಸೇಷನ್ ತೆಗೆದುಕೊಳ್ಳುವುದಕ್ಕೆ ಅವಕಾಶವಿತ್ತು. ಈಗ ತಾವು ಒಮಿಟ್ ಮಾಡಿದ್ದೇವೆ ಎಂದು ಹೇಳಿದರೆ ಯಾರೂ ಕೂಡ ಜಮೀನು ಬಿಟ್ಟು ಕೊಡುವುದಕ್ಕೆ ಮುಂದೆ ಬರುವುದಿಲ್ಲ, ಅಂಥ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಇದರ ಬಗ್ಗೆ ಸ್ವಲ್ಪ ಪರಿಶೀಲನೆ ಮಾಡಬೇಕು. ಮತ್ತು ಇದರ ಬಗ್ಗೆ ಏನು ಕ್ರಮ ತೆಗೆದು ಕೊಳ್ಳುತ್ತೀರಿ ಎಂಬುದನ್ನೂ ಹೇಳಬೇಕು. ಕ್ಲಾಸ್ ೨೭ ರಲ್ಲಿ ಅಮೆಂಡ್‌ಮೆಂಟ್ ಸೆಕ್ಷನ್ ೮೩ ರಲ್ಲಿ ಏನ್ನು ಹೇಳುತ್ತಿರೆಂದರೆ

*** Matter expunged as orders by the Chair.

" 27. Amendment of Section 83.- In section 83 of the Principal Act, after the words "State Government," the words "free from all encumbrances" shall be inserted.

ಎಂದು ಹೇಳುತ್ತೀರಿ. ಅದರೆ ಸೆಕ್ಷನ್ ೮೩ ರಲ್ಲಿ ಸ್ಟೇಟ್ ಗೌರ್ನಮೆಂಟ್ ಎಂಬ ಪದ ಎಲ್ಲಿದೆ ? ಸ್ಟೇಟ್ ಗೌರ್ನಮೆಂಟ್ ಎಂಬ ಪದವೇ ಕಾಣುವುದಿಲ್ಲ. ಅಂದಮೇಲೆ ಯಾವುದರ ಮುಂದೆ ಇದನ್ನು ತರುವುದಕ್ಕೆ ಇಚ್ಛೆಪಡುತ್ತೀರಿ ಎಂಬುದು ಅರ್ಥವಾಗುತ್ತಿಲ್ಲ. ಪುಟ ೩೩ ರಲ್ಲಿ ಆ ಬಗ್ಗೆ ಹೇಳಿದ್ದೀರಿ ಇದನ್ನು ತಾವು ದಯವಿಟ್ಟು ಗಮನಿಸಬೇಕು. ತಾವು ಯಾವುದರ ಬಗ್ಗೆ ಅಮೆಂಡ್‌ಮೆಂಟ್ ತರಬೇಕೆಂದಿದ್ದೀರಿ ಎಂಬುದೇ ಅರ್ಥವಾಗುತ್ತಿಲ್ಲ. ಇದರಿಂದ ಏನಾಗುತ್ತದೆಂದರೆ ಸ್ಟೇಟ್ ಗೌರ್ನಮೆಂಟ್ ಇಲ್ಲದೇ ಇರುವ ಕಡೆ ತರುತ್ತೀರಿ ಎಂದು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಅದ್ದರಿಂದ ಈ ಬಗ್ಗೆ ತಾವು ಗಮನ ಹರಿಸಬೇಕೆಂದು ಹೇಳುತ್ತೇನೆ. ಕ್ಲಾಸ್ ೨೯ ರಲ್ಲಿ—

29. Amendment of Section 107.-In sub-section (1) of section 107 of the Principai Act,-

(I) Clause (ii) shall be omitted

ಎಂದು ಹೇಳುತ್ತೀರಿ. ಇದಕ್ಕೆ ಕಾರಣ ಏನುಎಂದು ಹೇಳಲಿಲ್ಲ. ಅವತ್ತು ಇದು ಒಳ್ಳೆಯ ಕಾನೂನಾಗಿದ್ದು ಈವತ್ತು ಅದನ್ನು ಒಮಿಟ್ ಮಾಡಬೇಕಾದರೆ ಏನು ಕಾರಣ ಎಂಬುದನ್ನು ತಾವು ತೋರಿಸಿಲ್ಲ. ಆದ್ದರಿಂದ ಇದರ ಬಗ್ಗೆ ತಾವು ಗಮನ ಹರಿಸಬೇಕು, ಮತ್ತೆ ಮುಂದೆ ಇನ್ನೊಂದು ವಿಷಯ ಏನೆಂದರೆ ಲಿನೋಲ್‌ಯನ್ನು ಬೆಳೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಲೆನೋಲ್ ಎಂಬುದು ಒಂದು ತರಹದ ಹುಲ್ಲು.

ಶ್ರೀ ಬಿ. ಬಸವಲಿಂಗಪ್ಪ.—ಅದು ಹುಲ್ಲಲ್ಲ, ಮರ.

ಶ್ರೀಮತಿ ಎಸ್. ಪ್ರಮೀಳ.—ಅದು ಮರ ಅಲ್ಲ. ಸೆಂಟ್ ತಯಾರು ಮಾಡುವುದಕ್ಕೆ ಉಪಯೋಗಿಸುವ ಹುಲ್ಲು ಸಾನು. ಇದರ ಬಗ್ಗೆ ಕೇಳಿ ತಿಳಿದುಕೊಂಡಿದ್ದೇನೆ. ಮತ್ತು ಡಿಕ್ಷನರಿಯಲ್ಲೂ ತೆಗೆದು ನೋಡಿದ್ದೇನೆ. Buttonists and experimental persons ಕೂಡ ಹೇಳಿದ್ದಾರೆ. ಇಂಥಾದ್ದಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ, ಅದರೆ ಜಮೀನು ಉಳುತ್ತೇನೆ. ಎಂದು ಹೇಳಿದರೆ ಅವರಿಗೆ ಕೊಡುವುದಿಲ್ಲ, ಇದು ಯಾವ ನ್ಯಾಯ ? ಆದ್ದರಿಂದ ಇದನ್ನು ತಾವು ಮತ್ತೊಮ್ಮೆ ಪರಿಶೀಲನೆ ಮಾಡಬೇಕು, ಮಾನ್ಯ ಶಾಪಣ್ಣನವರು ಇದಕ್ಕೆ ತಿದ್ದುಪಡಿ ತರಬೇಕೆಂದಿದ್ದಾರೆ. ಆಗ ಆ ಬಗ್ಗೆ ವಿವರವಾಗಿ ಹೇಳುತ್ತೇನೆ. ಮತ್ತೆ ಕ್ಲಾಸ್ ೭ ಜೊತೆಯಲ್ಲಿ ಕ್ಲಾಸ್ ೩೦ ಕೂಡ ಹೋಗುತ್ತದೆ. ಕ್ಲಾಸ್ ೩೦ ಅಮೆಂಡ್‌ಮೆಂಟ, ಸೆಕ್ಷನ್ ೧೧೨, ಸೆಕ್ಷನ ೩೮ ಮತ್ತು ಕ್ಲಾಸ್ ೭ ಎಲ್ಲಾ ಒಂದರಲ್ಲೇ ಬರುತ್ತದೆ. ಸೆಕ್ಷನ್ ೩೮ ಬಗ್ಗೆ ಹೇಳಬೇಕೆಂದರೆ ಇದೂ ಕೂಡ ಓಹೇ ಸುಪ್ರೀಂ ಕೋರ್ಟ್ ತೀರ್ಮಾನದ ಪ್ರಕಾರ ಸ್ಟೇಟ್‌ಲಿಸ್ಟ್‌ನಲ್ಲಿ ಬರುವುದಿಲ್ಲ. ಇದನ್ನು ತರುವುದಕ್ಕೆ ಈ ಸಭೆಗೇ ಅಧಿಕಾರವಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮೈನ್ ಆಕ್ಟ್ ನೋಡಿ.

ಶ್ರೀಮತಿ ಎಸ್. ಪ್ರಮೀಳ.—ಕ್ಲಾಸ್ ೩೦ ರಲ್ಲಿ (ಸಿ) ನಲ್ಲಿ

"(c) to held necessary enquiry and pass orders in cases relating to registration of agricultural labourers as owners of dwelling houses and land appurtenant there to under section 38."

ಎಂದು ಹೇಳುತ್ತೀರಿ. ಅದ್ದರಿಂದ ಸೆಕ್ಷನ್ ೩೮ ಕ್ಕೆ ರೆಫರ್ ಮಾಡುವವರೆಗೆ ಈ ಸಭೆಯಲ್ಲಿ ತಿದ್ದುಪಡಿ ತರುವುದಕ್ಕೆ ಆಗುವುದಿಲ್ಲ. ಈ ಸಭೆಯ ವ್ಯಾಪ್ತಿಗೆ ಇದು ಬರುವುದಿಲ್ಲ ಇದರ ಬಗ್ಗೆ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳಿ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ಮತ್ತೆ ಅಮೆಂಡ್‌ಮೆಂಟ್ ಚರ್ಚೆಗೆ ಬಂದಾಗ ಮಾತನಾಡುವುದಕ್ಕೆ ನನಗೆ ಅವಕಾಶ ಮಾಡಿಕೊಡುತ್ತೀರೆಂದು ತಿಳಿದುಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ವೀರಪ್ಪ ಮೊಯಿಲಿ(ಕಾರ್ಕಳ).—ಮಾನ್ಯ ಸಭಾಧ್ಯಕ್ಷಿಣಿಯವರೇ, ಈ ನಮ್ಮ ಮುಂದೆ ತಂದಿರತಕ್ಕಂಥ ಈ ಭೂ ಮಸೂದೆ ತಿದ್ದುಪಡಿ ಒಳ್ಳೆಯ ಕ್ರಾಂತಿಕಾರಕವಾದಂಥ ಒಂದು ತಿದ್ದುಪಡಿ ಯಾಗಿದೆ. ಕಳೆದ ಬಾರಿ ಕೋರ್ಟಿನ ವ್ಯವಹಾರಗಳ ದವಡೆಯಲ್ಲಿ ಸಿಕ್ಕಿಂದಂಥ ಭೂ ಮಸೂದೆಯನ್ನು ಸರಿಯಾಗಿ ತಿದ್ದುಪಡಿ ಮಾಡಿ ತನ್ಮೂಲಕ ಯಾವ ಒಕ್ಕಲುಗಳನ್ನು ಭೂಮಿಯನ್ನು ಸಾಗುವಳಿ ಮಾಡು ತ್ತಿದ್ದರೋ ಅಂಥವರಿಗೆ ಯಾವುದೇ ಒಂದು ಕಾನೂನು ತಡೆಯಿಲ್ಲದೆ ಭೂಮಿಯ ಹಕ್ಕನ್ನು ಕೊಡು ವಂತೆ ಅನುಕೂಲವಾಗಲು ಒಂದು ತಿದ್ದುಪಡಿಯನ್ನು ಮಾಡಿದ ಫಲಿತಾಂಶವಾಗಿ ಅದು ಜೀವಂತವಾಗಿ ಈಗ ನಮ್ಮ ಮುಂದಿದೆ. ೧೯೬೧ರಲ್ಲಿ ಮಾಡಿದಂಥ ಭೂಮಸೂದೆ ಕಾನೂನು ಸುಮಾರು ೧೯೭೪ನೇ ಇಸವಿಯವರೆಗೂ ಕೂಡ ಇದ್ದು ತನ್ಮೂಲಕ ಯಾರು ಜಮೀನನ್ನು ಮಾಡುತ್ತಿರುತ್ತಾನೆ ಅವನಿಗೆ ಭೂ ಹಕ್ಕನ್ನು ಕೊಡುವುದಕ್ಕೆ ಆಗದಂಥ ಸಂದಿಗ್ಧ ಪರಿಸ್ಥಿತಿಯನ್ನು ಪಾರು ಮಾಡುವ ಸಂದರ್ಭದಲ್ಲಿ ಆಗಲೂ ಅನೇಕ ಸಂದೇಹಗಳು ಬಂದಿದ್ದು ಇದೆ. ಪ್ರಮುಖವಾಗಿ ಎಲ್ಲಾ ತರಹದ ದಣಿಗೆ ಅದರಲ್ಲೂ ಕೂಡ ಯಾರು ಚಿಕ್ಕ ಹಿಡುವಳಿದಾರರಿದ್ದಾರೆ ಮತ್ತು ಯಾರಿಗೆ ಈ ಭೂಮಿ ಬಿಟ್ಟು ಬೇರೆ ಏನೂ ಇರುವುದಿಲ್ಲ, ಅಂಥವರಿಗೆ ರಿಸಂಪ್‌ಷನ್ ಸ್ವಾಧೀನಕ್ಕೆ ಭೂಮಿ ಸಿಕ್ಕುವಂಥ ಪ್ರಮೇಯ ೧೯೬೧ರ ಕಾನೂನಿನಲ್ಲಿ ಇದ್ದಾಗ ಅದನ್ನು ತೊಡೆದುಹಾಕಲೇ ಬಾರದು, ಹಾಗೆ ಮಾಡಿದರೆ ತೊಂದರೆಯಾಗುತ್ತದೆ ಎಂಬ ದೊಡ್ಡ ಕೂಗು ಎದ್ದಿದ್ದು ಇದೆ.

ಆ ಕೂಗಿನಿಂದಲೇ ೧೯೬೧ ರಿಂದ ೧೯೭೪–೭೫ರವರೆಗೆ ಒಬ್ಬ ಒಕ್ಕಲಿಗ ಕೂಡ ಭೂಮಿಯನ್ನು ಕೊಡಲಿಕ್ಕೆ ಆಗಲಿಲ್ಲ, ಒಬ್ಬ ಧಣಿಗೆ ಕೂಡ ರಿಸೆಂಪ್‌ಷನ್ ಪ್ರಕಾರ ಜಮೀನನ್ನು ಕೊಡಲಿಕ್ಕೆ ಆಗಲಿಲ್ಲ. ಆದುದರಿಂದ ಇಡೀ ಕರ್ನಾಟಕದ ಹಳ್ಳಿಗಳಲ್ಲಿ ಒಂದು ರೀತಿಯಾದ ರಕ್ತಪಾತ ಮತ್ತು ಒಂದು ರೀತಿಯಾದ ಅಲ್ಲೋಲ ಕಲ್ಲೋಲ ನಡೆದದ್ದು ಇದೆ. ಆದರೆ ಯಾವಾಗ ಈ ಹಳ್ಳಿಗಳಲ್ಲಿ ವ್ಯವಸ್ಥೆ ಆಯಿತು ಎಂದರೆ, ಕಳೆದ ಬಾರಿ ತಿದ್ದುಪಡಿ ತಂದಾಗ, ಬರೀ ತಿದ್ದುಪಡಿ ತಂದರೆ ಸಾಲದು ನ್ಯಾಯ ಸಿಗುವಂಥ ವೇದಿಕೆಯನ್ನು ಕೂಡ ತಯಾರು ಮಾಡಬೇಕು ಎಂದು ನಾವು ಹೊರಟೆವು. ಏಕೆಂದರೆ, ನಮಗೆ ಈ ಕಾನೂನು ಪರಿಧಿ ಯಲ್ಲಿ ಒಕ್ಕಲಿಗೆ ಭೂಮಿ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ, ಅದಕ್ಕೆ ಗೇಣೀ ಚೀಟಿ ಬೇಕೇ ಬೇಕು. ಗೇಣಿ ಚೀಟಿ ಇದ್ದರೂ ಕೂಡ ಅದಕ್ಕೆ ಒಕ್ಕಲು ದಸ್ಕತ್ತಾಗಲೀ, ಯಾರದೇ ಸಮಕ್ಷಮದಲ್ಲಿ ಹಾಕಿದರೂ ಕೂಡ ಕೋರ್ಟಿನಲಿ ಎವಿಡೆನ್ಸ್ ಆಕ್ಟ್ ಪ್ರಕಾರ ಸಾಬೀತು ಆಗದ ಪಕ್ಷದಲ್ಲಿ ಆ ಗೇಣಿ ಚೀಟಿಗೆ ಬರೀ ಕಾಗದದ ಚೂರಿನ ಬೆಲೆ ಇರುತ್ತದೆ. ಯಾವರೀತಿಯ ಲೀಗಲ್ ಡಾಕ್ಯುಮೆಂಟ್ ಪ್ರಭಾವ ಕೂಡ ಅದರ ಮೇಲೆ ಇರುವುದಿಲ್ಲ. ಇದರಿಂದ ಒಕ್ಕಲಿಗೆ ಕೊನೇ ಹಂತದಲ್ಲಿ ಎವಿಡೆನ್ಸ್ ಸಿಕ್ಕುವ ಹಾಗಿಲ್ಲ ಎಂದು ತಿಳಿದು ಕ್ರಾಂತಿಕಾರಕವಾದ ಟ್ರಿಬ್ಯೂನಲ್‌ಗಳನ್ನು ರಚನೆ ಮಾಡಿದ್ದೇವೆ. ಈ ಟ್ರಿಬ್ಯೂನಲ್‌ಗಳ ರಚನೆಯಿಂದಾಗಿ ಸಾಕಷ್ಟು ಒಕ್ಕಲುಗಳಿಗೆ ಸಾಕಷ್ಟು ಭೂಮಿಯನ್ನು ಕೊಟ್ಟಿದ್ದೇವೆ. ಇಷ್ಟು ಮಾತ್ರ ಮಾಡಿದರೆ ಸಾಲದು. ಕೋರ್ಟ್‌ಗಳ ವ್ಯವಸ್ಥೆಯಲ್ಲೇ ಟ್ರಿಬ್ಯೂನಲ್‌ಗಳು ಕೆಲಸ ಮಾಡಿದರೆ, ನಾವು ಕಾನ್ಸೆಪ್ಟ್ ಆಫ್ ಟ್ರಿಬ್ಯೂನಲ್ಸ್ ಎಂದು ಯಾವ ಒಂದು ತತ್ವವನ್ನು ಅಳವಡಿಸಿ ಮಾಡಿದ್ದೆವೋ ಆ ತತ್ವದ ಪೂರೈಕೆ ಖಂಡಿತವಾಗಿ ಆಗಲಿಕ್ಕೆ ಸಾಧ್ಯವಾಗುವುದಿಲ್ಲ. ಸೆಕ್ಷನ್ ೧೩೩ ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ರಿಕಾರ್ಡ್ಸ್ ಆಫ್ ರೈಟ್ಸ್‌ನ್ನು ವಿಲೇಜ್ ಅಕೌಂಟೆಂಟ್ ಅಫಿಷಿಯಲ್ ಪ್ರೊಸೀಜರ್ ಪ್ರಕಾರ ಮಾಡು ತ್ತಾರೆ. ಆದರೂ ಕೂಡ ಮೂಲ ಭೂತವಾಗಿ ದೊಡ್ಡ ದೊಡ್ಡ ಭೂ ಮಾಲೀಕರ ಪರವಾಗಿಯೇ ಇರುತ್ತದೆ. ಸೆಕ್ಷನ್ ೧೩೩ ಪ್ರಕಾರ ಪ್ರಸಂಪ್‌ಟೀಟ್ ವ್ಯಾಲ್ಯು(Presumtive Value)ರಿಕಾರ್ಡ್ಸ್ ಆಫ್ ರೈಟ್ಸ್‌ಗೆ ಕೊಟ್ಟಮೇಲೆ ಅದರ value ತೆಗೆದು ಹಾಕುವಂಥ ಎವಿಡೆನ್ಸ್ ಟ್ರಿಬ್ಯುನಲ್‌ನಲ್ಲಿ ಮಾಡದೇ ಇದ್ದರೆ ಬಹುಶಃ ರಿಕಾರ್ಡ್ಸ್ ಆಫ್ ರೈಟ್ಸ್‌ನ ಒಂದೇ ಒಂದು ಕಾರಣದಿಂದ ಯಾವ ಟ್ರಿಬ್ಯೂ ನಲ್ಸ್‌ಗೆ ಹಕ್ಕನ್ನು ಕೊಡುತ್ತಿದ್ದೇವೆಯೋ ಅದು ಹೈಕೋರ್ಟಿನಲ್ಲಿ ಊರ್ಜಿತವಾಗುವುದಕ್ಕೆ ಕಷ್ಟವಾದೀತು Presumptive ವ್ಯಾಲ್ಯುವನ್ನು ತೆಗೆದುಹಾಕುವಂಥ ಒಂದು ಕ್ರಮ ಈ ತಿದ್ದುಪಡಿಯಲ್ಲಿ ಬಂದಿದ್ದರೆ ಚೆನ್ನಾಗಿತ್ತು ಎಂದು ನನಗೆ ಭಾವನೆ ಬರುತ್ತಾ ಇದೆ. ತಾವು ಇದನ್ನು ಸೂಕ್ಷ್ಮವಾಗಿ ಗಮನಿಸಬೇಕ ಎಂದು ನಾನು ಕೇಳಿಕೊಳ್ಳುತ್ತಾ ಇದ್ದೇನೆ. ಇಷ್ಟು ಮಾತ್ರವಲ್ಲ ಅಸಿಸ್ಟೆಂಟ್ ಕಮೀಷನರುಗಳನ್ನು ಛೇರ್ಮನ್‌ಗಳನ್ನಾಗಿ ನೇಮಕ ಮಾಡಿದ್ದೀರಿ. ಅವರು ರೆವಿನ್ಯೂ ಅಧಿಕಾರಿಗಳಾಗಿದ್ದರೂ ಕೂಡ ರಿಕಾರ್ಡ್ ಆಫ್ ರೈಟ್ಸ್. ರೆವಿನ್ಯೂ ರಿಕಾರ್ಡ್‌ಗಳ ಕಡೆ ಗಮನ ಕೊಟ್ಟಿರದೆ ಒಮ್ಮೆಲೆ ಹುಕುಂ ಕೊಡು ವಂಥ ಪ್ರವೃತ್ತಿಯನ್ನು ತಪ್ಪಿಸಬೇಕು. ಇವರು ರಿಕಾರ್ಡ್‌ಗಳ ಕಡೆ ಗಮನ ಕೊಡದೆ ಒಮ್ಮೆಲೆ ಹುಕುಂ ಕೊಡುವುದರಿಂದ ಹೈಕೋರ್ಟ್‌ನಲ್ಲಿ ಕೇಸುಗಳು ಬಂದು, ಅಲ್ಲಿ ಆ ಕಡೆ, ಈ ಕಡೆ ಹೋಗಿ ಒಕ್ಕಲಿಗೆ,

ಭೂಮಾಲೀಕರಿಗೆ ನ್ಯಾಯವೇ ಸಿಗದಂಥ ಪರಿಸ್ಥಿತಿ ಉಂಟಾಗಿದೆ. ಆದುದರಿಂದ ರಿಕಾರ್ಡ್ ಆಫ್ ರೈಟ್ಸ್ Presumptive value ಮತ್ತು ಎವಿಡೆನ್ಸ್ Disscuss ಮಾಡಿ finding ಬರುವ ರೀತಿಯಲ್ಲಿ ತೆರಭೇತಿಯನ್ನು ಅಸಿಸ್ಟೆಂಟ್ ಕಮೀಷನರುಗಳಿಗೆ ಕೊಡಬೇಕು. ಇವತ್ತು ಅನೇಕ ಜಡ್ಜ್‌ಮೆಂಟ್‌ಗಳು ನಮ್ಮ ಕಡೆ ಹೇಳುವ ಹಾಗೆ ದೇವರಿಗೆ ಹರಕೆ ಹೊತ್ತಹಾಗೆ ಔದಾಸೀನ್ಯತೆಯಿಂದ ಕೊಡಿವೆ. ಎಲ್ಲಾ ಜಡ್ಜ್‌ಮೆಂಟ್‌ಗಳಲ್ಲೂ ಅಸಿಸ್ಟೆಂಟ್ ಕಮಿಷನರ ಔದಾಸೀನತೆ ಹೆಚ್ಚಿದ್ದು ಕಾಣುತ್ತಾ ಇದೆ. ಅನೇಕ ಸಾರಿ ಅಸಿಸ್ಟೆಂಟ್ ಕಮಿಷನರ್ ಅವರು ಟ್ರಿಬ್ಯೂನಲ್ ಮೆಂಬರ್ರ್ ಹಾಗೆ ಹೇಳುತ್ತಾರೆ, ಹೀಗೆ ಹೇಳುತ್ತಾರೆ, ನಾವು ಮೆಜಾರಿಟಿ ಒಪಿನಿಯನ್ ಒಪ್ಪಬೇಕು ಎಂದು ಹೇಳುತ್ತಾರೆ. ಇವರು ಟ್ರಿಬ್ಯೂನಲ್ ಛೇರ್ಮನ್‌ಗಳಾಗಿ ಅವರ ವಾದವನ್ನು ತಾರದೇ ಜಡ್ಜ್‌ಮೆಂಟ್‌ನ್ನು ಕೊಡುವುದರಿಂದ ಯಾವುದೇ ರೀತಿಯ ಪ್ರಯೋಜನ ಒಕ್ಕಲಿಗೆ ಆಗಲೀ, ಭೂಮಾಲೀಕರಿಗೇ ಆಗಲಿ ಸಿಕ್ಕದಂಥ ಪರಿಸ್ಥಿತಿ ನಿರ್ಮಾಣವಾಗಿರುವುದನ್ನು ನಾವು ಕಾಣುತ್ತಾ ಇದ್ದೇವೆ. ಈ ದಿಶೆಯಲ್ಲಿ ಹೆಚ್ಚಿನ ಗಮನವನ್ನು ಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಾ ಇದ್ದೇನೆ ಇಲ್ಲಿ ತಾವು ಸಿವಿಲ್ ಪ್ರೊಸೀಜರ್ ಕೋಡನ್ನು ಇದಕ್ಕೆ ಅಪ್ಲೈ ಮಾಡಬೇಕು. ಸೆಕ್ಷನ್ ೧೧೩ರ ಪ್ರಕಾರ ಹಿಂದಿನಿಂದಲೂ ಬಿಫೋರ್ ಕೋರ್ಟ್ ಎಂಬುದನ್ನು ಉಳಿಸಿಕೊಂಡಿದೆ ಲ್ಯಾಂಡ್ ಟ್ರಿಬ್ಯೂನಲ್ಸ್ ಬಗ್ಗೆ ಕೋರ್ಟಿನಲ್ಲಿ ವ್ಯವಹಾರಗಳು ನಡೆದಂಥ ಪ್ರಸಂಗಳಿವೆ. ಕೋರ್ಟ್‌ನಲ್ಲಿ ಇನ್ನೂ ಕೂಡ ಉಳಿಸಿಕೊಂಡಿದೆ. ಬಿಫೋರ್ ದಿ ಕೋರ್ಟನ್ನು ತೆಗೆದುಹಾಕಿಲ್ಲ. ಅದು ಸಾಮಾನ್ಯವಾದ ಆಕ್ಟ್ ಆಗುತ್ತದೆ. ತನ್ಮೂಲಕ ಅನೇಕ ಸಂದರ್ಭಗಳಲ್ಲಿ ಈ ಜಡ್ಜ್‌ಮೆಂಟ್‌ಗಳಲ್ಲಿ ಟೈಪೊಗ್ರಾಫಿಕಲ್ ಮಿಸ್ಟೇಕ್ ಆಗುತ್ತದೆ. ಜಡ್ಜ್‌ಮೆಂಟ್‌ಗಳಲ್ಲಿ ಸರ್ವೆ ನಂಬರ್ಸ್ ತಪ್ಪಾಗಿ ಬಿದ್ದು ಹೋಗುತ್ತದೆ. ಈ ಸಂದರ್ಭದಲ್ಲಿ ಜಡ್ಜ್‌ಮೆಂಡ್‌ನ್ನು ಸರಿಮಾಡಲಿಕ್ಕೆ ಬರಬೇಕು. ಇಷ್ಟು ಮಾತ್ರವಲ್ಲ, ಎರಡು ಪಕ್ಷಗಳು ಅವರ ವಾದವನ್ನು ಮುಂದೆ ಇಟ್ಟಾಗ ಬರುವಂಥ ಅನೇಕ ತೊಂದರೆಗಳನ್ನು ಸರಿಮಾಡುವಂಥ ಅಧಿಕಾರ ಇದಕ್ಕೆ ಇರಬೇಕು. ಪ್ರೊಸೀಜರಲ್ ಇರ್ರೆಗ್ಯುಲಾರಿಟೀಸ್ ಮೇಲೆ ದಾವೆಗಳು ಬರುವ ಕಾರಣ ನೂರಕ್ಕೆ ೯೦ ಪಾಲು, ಇವುಗಳನ್ನು ನಿಲ್ಲಿಸಬೇಕಾದರೆ ಇದಕ್ಕೆ ಸಿವಿಲ್ ಪ್ರೊಸೀಜರ್ ಕೋಡನ್ನು ಅನ್ವಯಿಸಿದರೆ ಮತ್ತು ಸೆಕ್ಷನ್ ೧೧೩ರಲ್ಲಿರತಕ್ಕ ಬಿಫೋರ್ ದಿ ಕೋರ್ಟ್ ಶಬ್ದಗಳನ್ನು ನಾವು ತೆಗೆದು ಹಾಕಿದಾಗ ಹೆಚ್ಚಿನ ಸ್ವಾಯತ್ತತೆ ಬಂದು, ಅನೇಕ ತಪ್ಪುಗಳನ್ನು ಸರಿಮಾಡುವಂಥ ಅಧಿಕಾರವನ್ನು ಟ್ರಿಬ್ಯೂನಲ್ಸ್‌ಗೆ ಕೊಟ್ಟಾಗ ಅನೇಕ ಲೋಪದೋಷಗಳನ್ನು ನಾವು ತೆಗೆದುಹಾಕಲಿಕ್ಕೆ ಇದರಿಂದ ಸಾಧ್ಯವಾಗುತ್ತದೆ.

ಇನ್ನು ಕೃಷಿ ಕಾರ್ಮಿಕರ ಮನೆಯ ವಿಚಾರದ ಬಗ್ಗೆ ಹೇಳುವುದಾದರೆ, ನಾನು ಮೊದಲೇ ಅಂದಂತೆ ನೀವು ಇಟ್ಟಂಥ ಒಂದು ಬಹು ದೊಡ್ಡ ಕ್ರಾಂತಿಕಾರಿ ಹೆಜ್ಜೆ. ಕೃಷಿಕಾರ್ಮಿಕರಿಗೆ ನಮ್ಮ ಕರ್ನಾಟಕದಲ್ಲಿ ಯಾವ ರೀತಿಯ ರಕ್ಷಣೆ ಇಲ್ಲ. ನೀವು ಅವರಿಗೆ ಮಿನಿಮಮ್ ವೇಜಸ್ ಆಕ್ಟ್‌ನ್ನು ಅಪ್ಲೈ ಮಾಡಿರಬಹುದು. ಅವರ ಒಂದು ಪರಿಸ್ಥಿತಿ ಅನ್ ಸೆಟಲ್ ಆಗಿರುವಾಗ ಮಿನಿಮಮ್ ವೇಜಸ್ ಆಕ್ಟ್ ಕೂಡ ಅವರ ಮೇಲೆ ಯಾವ ಪ್ರಭಾವವನ್ನು ಬೀರದೇ, ಅದನ್ನು ಎನ್‌ಫೋರ್ಸ್ ಮಾಡಲಿಕ್ಕೆ ಕಷ್ಟವಾಗುತ್ತದೆ. ನಮ್ಮ ದೇಶದ ಅಥವಾ ನಮ್ಮ ಸಮಾಜದ ಅನೇಕ ಮುಖಗಳನ್ನು ನಾವು ಕಂಡುಕೊಂಡು ಕೃಷಿ ಕಾರ್ಯದಲ್ಲಿ ತೊಡಗಿರುವಂಥ ಕೃಷಿ ಕಾರ್ಮಿಕರಲ್ಲಿ ನಾವು ಸಂತೃಪ್ತಿ ಭಾವವನ್ನುಂಟು ಮಾಡದೇ ಹೋದರೆ, ಅವರ ಜೀವನದಲ್ಲಿ ಒಂದು ರೀತಿಯ ಆಶಾಜ್ಯೋತಿಯನ್ನು ಹುಟ್ಟಿಸದೇ ಇದ್ದರೆ ನಾವು ನಕ್ಸಲೈಟ್ಸ್ ಚಟುವಟಿಕೆಗಳು ಎಂದು ಏನು ಹೇಳುತ್ತೇವೆ ಆ ರೀತಿ ಕೃಷಿ ಕಾರ್ಮಿಕರ ಹೃದಯದೊಳಗೆ ಇರುವಂಥ ಜ್ವಾಲೆ ಒಮ್ಮೆಲೇ ಉಲ್ಬಣಗೊಂಡು ಇಡೀ ದೇಶವನ್ನೇ ಸುಟ್ಟು ಹಾಕುವಂಥ ಪರಿಸ್ಥಿತಿ ಉಂಟಾಗಬಹುದು. ಆ ರೀತಿ ಇಂತಹ ಸಮಾಜಿಕ ಪ್ರಜ್ಞೆಯನ್ನು, ಸಾಮಾಜಿಕ ವ್ಯವಸ್ಥೆಯನ್ನು ಗಣನೆಗೆ ತೆಗೆದುಕೊಂಡು ನಾವು ಮಾಡಬೇಕು. ಕೃಷಿ ಕಾರ್ಮಿಕರು ಅವರು ಮೂಲ ಹೊಲೆಯರು ಎಂದು ಕರೆಸಿಕೊಳ್ಳಲಿ ಅಥವಾ ಯಾವುದೇ ಇತರ ಹೆಸರಿನಿಂದ ಕರೆಸಿ ಕೊಳ್ಳಲಿ ಕೃಷಿ ಕಾರ್ಮಿಕರಿಗೆ ಒಂದು ರೀತಿಯಾದ ಭದ್ರತೆ ಜೀವನ ನಿಮಗೂ ಇದೆ ಎಂದು ಒಂದು ಹೊಸ ಜೀವನವನ್ನು. ಒಂದು ಚೈತನ್ಯವನ್ನು ತಾವು ಏನು ಕೊಟ್ಟಿದ್ದೀರಿ ಅದು ನಿಜವಾಗಿಯೂ ಒಂದು ಕ್ರಾಂತಿದಾಯಕವಾದ ಕಾನೂನು ಮಾತ್ರವಲ್ಲದೆ ಮುಂದಿನ ಸಮಾಜ ಕೂಡ ಇದು ಒಂದು ಐತಿಹಾಸಿಕ ಘಟನೆ ಎಂದು ಈ ಸರ್ಕಾರವನ್ನು ಹೊಗಳಲಿಕ್ಕೆ ಇದೆ ಎಂದು ನಾನು ಈ ದಿವಸ ಹೇಳಲಿಕ್ಕೆ ಬಯಸುತ್ತಾ ಇದ್ದೇನೆ.

೫-೩೦ ಪಿ. ಎಂ.

ಈ ಕೃಷಿ ಕಾರ್ಮಿಕರ ಒಂದು ಜೀವನವನ್ನು ಬದಲಾವಣೆ ಮಾಡುವಸಲುವಾಗಿ ಒಂದು ಪ್ರಗತಿಪರವಾದ ಹೆಜ್ಜೆಯನ್ನು ತಾವು ಇಟ್ಟಿದ್ದೀರಿ. ಆದರೆ ಇಷ್ಟು ಆದರೆ ಸಾಲದು, ಕೃಷಿ ಕಾರ್ಮಿಕರಿಗೆ

ಹಳ್ಳಿಗಳಲ್ಲಿ ಸಂಪೂರ್ಣ ರಕ್ಷಣೆಯನ್ನು ತಾವು ಕೊಡಬೇಕಾಗಿದೆ. ಪಟ್ಟಣಗಳಲ್ಲಿಯಾದಿರೆ ರೆಂಟ್ ಕಂಟ್ರೋಲ್ ಆಕ್ಟ್ ಎಂದು ಇದೆ. ಆದರೆ ಹಳ್ಳಿಯಲ್ಲಿರುವವರಿಗೆ ತಾವು ಯಾವುದೇ ರೀತಿಯ ರಕ್ಷಣೆಯನ್ನೂ ಕೊಟ್ಟಿಲ್ಲ. ರಾತ್ರಿಯಾಗಿ ಬೆಳಗಾಗುವಷ್ಟು ಹೊತ್ತಿನಲ್ಲಿ ಮೊದಲು ಇದ್ದ ಬೆಳೆಯನ್ನಾಗಲೀ, ಇಲ್ಲ ಮನೆಯನ್ನಾಗಲೀ ಸಂಪೂರ್ಣವಾಗಿ ಧ್ವಂಸ ಮಾಡಿ ಅಲ್ಲಿ ಏನೂ ಇರಲೇ ಇಲ್ಲಾ ಎಂದು ಮಾಡುವಂಥಾ ಒಂದು ಪ್ರವೃತ್ತಿ ಹಳ್ಳಿಗಳಲ್ಲಿರುವುದರಿಂದ ಮೊದಲು ತಾವು ಹಳ್ಳಿಗಳಲ್ಲಿರುವಂಥವರಿಗೆ ರಕ್ಷಣೆ ಕೊಡಬೇಕಾಗಿದೆ. ಆ ಕೆಲಸ ಮಾಡದಿದ್ದರೆ ತಾವು ಮಾಡತಕ್ಕಂಥ ಕಾನೂನಿನ ಫಲ ಸರಿಯಾಗಿ ಅವರಿಗೆ ದೊರೆಯುವುದಿಲ್ಲ. ಆದುದರಿಂದ ಮೊದಲು ರಕ್ಷಣೆ ಕೊಡುವ ಬಗ್ಗೆ ಪೋಲೀಸಿನವರಿಗೋ, ಇಲ್ಲ ಡೆಪ್ಯುಟಿ ಕಮಿಷನರ್ ರವರಿಗೋ ಇಲ್ಲ ತಹಶೀಲ್ದಾರ್‌ರವರಿಗೋ ಹುಕುಂ ಕೊಡಿ. ಹಳ್ಳಿಯಲ್ಲಿರುವ ಕೃಷೀ ಕಾರ್ಮಿಕರ ರಕ್ಷಣೆಯನ್ನು ನೋಡಿಕೊಳ್ಳುವ ಜವಾಬ್ದಾರಿ ಅವರ ಮೇಲೆ ಹಾಕಿ, ಇಲ್ಲದೇ ಹೋದರೆ ತಾವು ಮಾಡತಕ್ಕ ಕಾನೂನು ೪ ಗೋಡೆಗಳ ಮಧ್ಯೆಯೇ ಉಳಿದು ಅದರ ಫಲ ಕೃಷಿ ಕಾರ್ಮಿಕರಿಗೆ ದೊರೆಯದೇ ಹೋಗಬಹುದು ಎನ್ನುವ ಭಯ ಉಂಟಾಗಿದೆ. ಆದುದರಿಂದ ಅವರಿಗೆ ಯಾವುದೇ ಕಾರಣದಿಂದಲೂ ತೊಂದರೆಯಾಗದಂತೆ ನೋಡಿಕೊಳ್ಳಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇಷ್ಟು ಮಾತ್ರವಲ್ಲ ಶ್ರೀಮತಿ ಪ್ರಮೀಳಾರವರು ಮಾತನಾಡುತ್ತಾ Concurrent list ನಲ್ಲಿ ಬರುತ್ತದೆ. State list ನಲ್ಲಿ ಬರುವುದಿಲ್ಲವೆನ್ನುವ ವಾದವನ್ನು ಮುಂದಿಟ್ಟರು. ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್‌ನ ಕಾಪಿಯನ್ನು ನಾನು ನೋಡಿಲ್ಲ, ಆದರೆ ನನಗೆ ತಿಳಿದಂತೆ ಇದು State list ನಲ್ಲಿಯೇ ಬರುತ್ತದೆ. ಏತಕ್ಕೆಂದರೆ ಇದನ್ನು ನಾವು ಏನೂ ಹೊಸದಾಗಿ ಮಾಡಿದ ಕಾನೂನು ಅಲ್ಲ. ಸೆಕ್ಷನ್ ೩೮ ರಲ್ಲಿ ಹಿಂದಿನ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಪ್ರಕಾರ ಯಾವ ಕೃಷಿ ಕಾರ್ಮಿಕ ಮನೆ ಕಟ್ಟಿಕೊಂಡಿದ್ದಾನೋ ಅವನಿಗೇ ಆ ಮನೆಯನ್ನು ಕೊಡಬೇಕೆಂದು ಇದೆ, ಅದನ್ನೇ ಈಗ ಸ್ವಲ್ಪ ಎಕ್ಸ್‌ಟೆಂಡ್ ಮಾಡಿ ಈ ಕಾನೂನಿಗೆ ತಿದ್ದುಪಡಿಯನ್ನು ತಂದಿದ್ದಾರೆ. ಜಮೀನಿನಲ್ಲಿ ಮನೆ ಕಟ್ಟಿಕೊಂಡಿರಲಿ, ಕಟ್ಟಿಕೊಳ್ಳದೇ ಇರಲೀ ಅವನಿಗೆ ಅಲ್ಲಿಯೇ ಅವಕಾಶ ಮಾಡಿಕೊಡಬೇಕೆಂದು ಯೋಚನೆ ಮಾಡಿ ವಿಚಾರ ಮಾಡಿ ತಂದಿದ್ದಾರೆ, ಅದಕ್ಕೆ ಹಿಂದೆ President Consent ಕೂಡ ದೊರಕಿದೆ. ಸಂವಿಧಾನದ ೭ನೇ ಷೆಡ್ಯೂಲ್ ಐಟಂ ೧೮ರಲ್ಲಿ ಈ ವಿಚಾರ ಸ್ಪಷ್ಟವಾಗಿ ಹೇಳಿದೆ. ಏನೆಂದರೆ.--

"Land, that is to say, rights in or over land, land tenures including he relation of landlord and tenant, and he collection of rents; transfer and allenation of agrieultural land; land improvement and agricultural loans; colonisation........." ಎಂದು, ಆದುದರಿಂದ ಇದು ಕನ್‌ಕರೆನ್ಸ್ ಲೀಸ್ಟ್‌ನಲ್ಲಿ ಬರುವುದಿಲ್ಲ, ಸ್ಟೇಟ್ ಲೀಸ್ಟ್‌ನಲ್ಲಿ ಬರುತ್ತದೆ. ಆದುದರಿಂದ ಇವತ್ತು ಕೃಷಿ ಸುಧಾರಣೆ ಯಾಗಬೇಕಾದರೆ ಕೃಷಿ ಕಾರ್ಮಿಕನೂ ಸುಧಾರಣೆ ಹೊಂದಬೇಕಾಗಿದೆ. ಆದುದರಿಂದ ಇವತ್ತು ನಮ್ಮ ಏನೊಂದು ಅನುಭವವಿದೆ ಅದನ್ನು ಅಳವಡಿಸಿಯೇ ಈ ಕಾನೂನನ್ನು ಮಾಡಿದ್ದೇವೆ, ಇದು ಬಹಳ ಉಪಯುಕ್ತವಾಗಿದೆ. ಈ ಕಾನೂನನ್ನು ಜಾರಿ ಮಾಡುವಂಥಾ ಕಾಲದಲ್ಲಿ ರೈತರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿ ಕೊಳ್ಳಬೇಕಾದ್ದು ನಮ್ಮ ಜವಾಬ್ದಾರಿ ಮತ್ತು ಕರ್ತವ್ಯವಾಗಿದೆಂದು ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಇನು ಹೊಸದಾಗಿ ಏನು ತಿದ್ದುಪಡಿಯನ್ನು ಸೆಕ್ಷನ್ ೫ (೨)ಕ್ಕೆ ತಂದಿದ್ದೀರಿ ಅದನ್ನು ನೋಡಿ ನನ್ನ ಮನಸ್ಸಿಗೆ ಸ್ವಲ್ಪ ಬೇಸರವಾಗಿದೆ, ಈ ತಿದ್ದುಪಡಿ ಪ್ರಗತಿದಾಯಕವಾಗಿಲ್ಲ. ಗೇಣಿದಾರರಿಗೆ ಅನಾನುಕೂಲವಾಗುತ್ತದೆ. ಆದುದರಿಂದ ಇದನ್ನು ವಾಪಾಸು ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.

ಇನ್ನು ಪರಿಹಾರ ಧನ ಕೊಡುತ್ತಿರುವ ರೀತಿಯಲ್ಲಿ ಅನೇಕ ತೊಂದರೆಗಳು ಆಗುತ್ತಿವೆ. ಆದರಲ್ಲೂ ಮಲೆನಾಡು ಪ್ರದೇಶದಲ್ಲಿ ಉಳುವಂಥಾ ಭೂಮಿಗೆ ಐದುನೂರು ರೂಪಾಯಿ ಪರಿಹಾರವಾದರೆ Nonfruit bearing ಆದರೆ ಹದಿನೈದು ಸಾವಿರ ರೂಪಾಯಿ ಹಾಕುತ್ತಿದ್ದೀರಿ. ಇದರಿಂದ ಗೇಣಿದಾರರಿಗೆ ತೊಂದರೆಯಾಗುತ್ತದೆ. ಇದರ ಬಗ್ಗೆ ನಾವು ಈಗಾಗಲೇ ಮಾನ್ಯ ಕಂದಾಯ ಮಂತ್ರಿಗಳವರ ಗಮನಕ್ಕೆ ಅನೇಕ ಬಾರಿ ತಂದಿದ್ದೇವೆ. ಆದುದರಿಂದ ತಾವು ಇದನ್ನು ತಕ್ಷಣ ತಮ್ಮ ಗಮನಕ್ಕೆ ತೆಗೆದುಕೊಂಡು ಮುಂದಾದರೂ ಅನಾಹುತವಾಗದ ಹಾಗೆ ನೋಡಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಆದ್ದರಿಂದ ಅವರಿಗೆ ಒಂದು ಪರಿಹಾರವನ್ನು ನಿಷ್ಕರ್ಷೆ ಮಾಡುವಾಗ ಒಂದು ಶಾಸ್ತ್ರೀಯ ಕ್ರಮವನ್ನನುಸರಿಸಿ ಮಾಡಬೇಕು. ಏಕೆಂದರೆ ಅಲ್ಲಿ ಒಂದು Form House ಇರುತ್ತದೆ ಎಂದು ಇಟ್ಟು

ಕೊಳ್ಳೋಣ. ೨೦ ವರ್ಷದ ಹಿಂದೆ ಆ Farm House ಕಟ್ಟಿಸಿ ಎಂದರೂ ಅದರ ಬೆಲೆಯನ್ನು ಈಗ ಕಟ್ಟಿದಂಥ ಮನೆಗೆ ನಿಷ್ಕರ್ಷೆ ಮಾಡಿದರೆ, ಅದರಲ್ಲಿ Depreciation Value ಕಂಡುಬಂದರೆ ಆಗ ಆ ಮನೆಯ ಬೆಲೆ ಸೊನ್ನೆ ಆಗುತ್ತದೆ. ಅದರ ಬೆಲೆಯನ್ನು ೨ ಸಾವಿರದಿಂದ ೧೦ ಸಾವಿರ ರೂಪಾಯಿಗಳಿಗೆ ನಿಷ್ಕರ್ಷೆ ಮಾಡಿದರೆ ಅಧಿಕಾರಿಗಳಲ್ಲಿ ಇದರಿಂದ ಲಂಚರುಷುವತ್ತುಗಳಿಗೆ ಕಾರಣವಾಗುತ್ತದೆ. ಆದ್ದರಿಂದ ಈ ದಿಶೆಯಲ್ಲಿ ಯಾವ ವಿವಂಚನೆಗೂ ಅವಕಾಶವಾಗದಂತೆ ಒಂದು ಶಾಸ್ತ್ರೀಯ ಕ್ರಮವನ್ನು ಅನುಸರಿಸಬೇಕು. ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ಈ ಕ್ರಾಂತಿಕಾರವಾದ ಕಾನೂನಿನಿಂದ ಒಂದು ಹೊಸ ಜೀವನ ಪ್ರಾರಂಭವಾಗುವುದಕ್ಕೆ ಇದು ಕಾರಣಾಭೂತದಾಗಿರುವುದರಿಂದ ಈ ತಿದ್ದುಪಡಿ ಮಸೂದೆಯನ್ನು ಸ್ವಾಗತಿಸಿ, ಇಷ್ಟು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದನೆಯನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎ. ರಾಮಚಂದ್ರ, (ಸೂಳ್ಯ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ದಿವಸ ಮಾನ್ಯ ಕಂದಾಯ ಮಂತ್ರಿಯವರು ಇಲ್ಲಿ ಏನೊಂದು ತಿದ್ದುಪಡಿ ಮಸೂದೆಯನ್ನು ತಂದಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಒಂದು ವಿಚಾರವನ್ನು ಮಾನ್ಯ ಮಂತ್ರಿಯವರಿಗೆ ಹೇಳುವುದಾದರೆ, ಅನೇಕ ಕಡೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹರಿಜನರು ದಣಿಗಳ ಒಕ್ಕಲಾಗಿ ಕೂಲಿ ಆಳುಗಳಾಗಿದ್ದಾರೆ ಅನೇಕ ಕಡೆಗಳಲ್ಲಿ ಅವರನ್ನು ಒಕ್ಕಲೆಬ್ಬಿಸಿದ ನಿದರ್ಶನಗಳು ಇದೆ. ಅಂತಹ ಸಂದರ್ಭಗಳಲ್ಲಿ ಅವರಿಗೆ ರಕ್ಷಣೆ ಇಲ್ಲವಾಗಿದೆ. ಅಂತಹವರಿಗೆ ರಕ್ಷಣೆ ಒದಗಿಸಬೇಕೆಂದು ಈ ಒಂದು ತಿದ್ದುಪಡಿ ಮಸೂದೆಯನ್ನು ತಂದಿದ್ದರೂ ಕೂಡ ಅವರಿಗೆ ಅಂತಹ ಸಂದರ್ಭಗಳಲ್ಲಿ ರಕ್ಷಣೆ ಸಿಕ್ಕುತ್ತಾ ಇಲ್ಲ. ಮಾನ್ಯ ಅಧ್ಯಕ್ಷರೇ, ನಾವು ಈ ಬಗ್ಗೆ ಮಾತನಾಡುವಾಗ ಮಾನ್ಯ ಮಂತ್ರಿಯವರು ಇಲ್ಲಿ ಇಲ್ಲದಿದ್ದರೆ ನಾವು ಮಾತನಾಡಿದ್ದಕ್ಕೂ ಪ್ರಯೋಜನವಿರುವುದಿಲ್ಲವೆಂದು ಕಾಣುತ್ತದೆ.

ಉಪಾಧ್ಯಕ್ಷರು.—ತಾವು ಮಾತನಾಡಿ, ಮಾನ್ಯ ಮಂತ್ರಿಯವರು ಇಲ್ಲೆ ಇದ್ದಾರೆ. ಅವರು ಬರುತ್ತಾರೆ.

ಶ್ರೀ ಎ. ರಾಮಚಂದ್ರ.—ನಾನು ಮಾತನಾಡುತ್ತಿರುವುದು ಅವರಿಗೆ ಕೇಳುತ್ತಾ ಇಲ್ಲ. ಇಲ್ಲಿದ್ದು ಅವರು ನಮ್ಮನ್ನು ನೋಡಿದರೆ ಅವರಿಗೆ ನಾನು ಹೇಳುವುದು ಅರ್ಥವಾಗುತ್ತದೆ. ಮಾನ್ಯ ಅಧ್ಯಕ್ಷಿಣಿಯವರೇ, ಈಗಾಗಲೇ ಹರಿಜನರ ರಕ್ಷಣೆಗಾಗಿ ಮತ್ತು ಬಡ ಕೂಲಿಗಾರರ ರಕ್ಷಣೆಗಾಗಿ ಅನೇಕ ತಿದ್ದುಪಡಿಗಳನ್ನು ತಂದಿದ್ದಾರೆ. ಮಾನ್ಯ ಮಂತ್ರಿಯವರು ನಮ್ಮ ಸೂಳ್ಯ ಕ್ಷೇತ್ರಕ್ಕೆ ಬಂದಿದ್ದಾಗ ಹರಿಜನ ಕೂಲಿಗಾರರಿಗೆ ಪಟ್ಟ ವಿತರಣೆ ಮಾಡುತ್ತೇವೆಂದು ಹೇಳಿದ್ದರು. ನಾನು ಅದನ್ನು ಇಲ್ಲವೆಂದು ಹೇಳುವುದಿಲ್ಲ. ಆದರೆ ಅಲ್ಲಿ ಕೂಲಿಗಾರರಾಗಿರುವುದು ಒಬ್ಬಿಬ್ಬರಲ್ಲ, ಅಲ್ಲಿ ದಣಿಗಳ ಒಕ್ಕಲಾಗಿ ಇರುವವರು ಸಾಧಾರಣವಾಗಿ ಶೇಕಡಾ ೨೫ ಕ್ಕಿಂತ ಕಡಿಮೆ ಜನ ಎಲ್ಲೂ ಇಲ್ಲ. ಅವರನ್ನು ಅಲ್ಲಿ ಒಕ್ಕಲೆಬ್ಬಿಸಿದ್ದಾರೆ. ಈ ಬಗ್ಗೆ ಸರ್ಕಾರಕ್ಕೆ ಎಷ್ಟೋ ಜನ ಮನವಿಯನ್ನು ಕೊಟ್ಟಿದ್ದಾರೆ. ಈತನಕ ಅವರಿಗೆ ಯಾವ ರೀತಿಯಿಂದಲೂ ಪರಿಹಾರವನ್ನಾಗಲೀ. ರಕ್ಷಣೆಯನ್ನಾಗಲೀ ಆ ಸ್ಥಳದಲ್ಲಿ ಕೊಟ್ಟಿಲ್ಲ. ಆ ಸ್ಥಳದಲ್ಲಿ ಮೊದಲಿನಿಂದಲೂ ದಣಿಗಳು ಗದ್ದೆ ಕೂಲಿ ಕೆಲಸಕ್ಕಾಗಿ ಈ ಜನರನ್ನು ಕರೆಸಿಕೊಂಡಿರುತ್ತಾರೆ. ಅಲ್ಲಿ ಅವರೇ ಒಂದೊಂದು ಗುಡಿಸಲನ್ನು ಕಟ್ಟಿಸಿಕೊಂಡು ಅಲ್ಲೇ ವಾಸ ಮಾಡಿಕೊಂಡು ಈಗಲೂ ಇದ್ದಾರೆ. ಆ ಸ್ಥಳದಲ್ಲಿ ಅವರಿಗೆ ಯಾವ ಒಂದು ಹಕ್ಕೂ ಇರುವುದಿಲ್ಲ. ಈ ಬಗ್ಗೆ ಪ್ರತಿಯೊಂದು ಗ್ರಾಮಕ್ಕೂ ತಮ್ಮ ಅಧಿಕಾರಿಗಳನ್ನು ಕಳಿಸಿ ವಿಚಾರಣೆ ಮಾಡಿಸಬೇಕು. ಮತ್ತು ಎಷ್ಟು ಜನ ಹರಿಜನರು, ಬಡ ಕೂಲಿಗಾರರು ಅಲ್ಲಿ ದಣಿಗಳ ಒಕ್ಕಲಾಗಿದ್ದಾರೆ ಎಂಬುದನ್ನು ತಿಳಿದುಕೊಂಡು ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಆ ಕೃಷಿ ಕೂಲಿಗಾರರು ಈ ಭೂ ಮಸೂದಾ ಕಾನೂನಿನ ಅಡಿಯಲ್ಲಿ ಬರುವುದಿಲ್ಲ. ಅವರು ಇದುವರೆಗೂ ಡಿಕ್ಲರೇಷನ್ ಕೊಟ್ಟಿಲ್ಲ. ಅವರು ಡಿಕ್ಲರೇಷನ್ ಕೊಡುವ ಪರಿಸ್ಥಿತಿಯಲ್ಲೂ ಇಲ್ಲ. ಇಂತಹವರ ಬಗ್ಗೆ ತಮ್ಮ ಅಧಿಕಾರಗಳ ಮುಖಾಂತರ ಸರ್ವೆ ಮಾಡಿಸಿ, ಆ ಬಗ್ಗೆ ಲೆಕ್ಕ ತರಿಸಿ ಅವರ ಜಾಗವನ್ನು ಅವರಿಗೆ ಕೊಡಿಸಬೇಕೆಂದು ಮಾನ್ಯ ಮಂತ್ರಿಯವರಲ್ಲಿ ನಾನು ಒತ್ತಾಯ ಮಾಡುತ್ತೇನೆ. ಈ ತರಹದ ಪರಿಸ್ಥಿತಿ ಹಳ್ಳಿಗಾಡಿನಲ್ಲಿ ಮಾತ್ರವಲ್ಲ. ಮಂಗಳೂರು ನಗರದಲ್ಲಿ ಅನೇಕ ಕಡೆಗಳಲ್ಲಿ ಇದೆ. ಈ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳು ಅಲ್ಲಿಗೆ ಬಂದಿದ್ದಾಗ ಅವರಿಗೆ ಬಹಳ ಜನರು ಮನವಿಗಳನ್ನು ಕೊಟ್ಟಿದ್ದಾರೆ. ಅದನ್ನು ಅವರು ಕಸದ ಬುಟ್ಟಿಗೆ ಹಾಕಿದ್ದಾರೆಯೋ ಅಥವಾ ಸುಟ್ಟು ಹಾಕಿದ್ದಾರೆಯೋ ನನಗೆ ಗೊತ್ತಿಲ್ಲ. ಏಕೆಂದರೆ ಇಷ್ಟರವರೆಗೆ ಸರ್ಕಾರ ಆ ಬಗ್ಗೆ ಏನೊಂದು ತೀರ್ಮಾನವನ್ನೂ ಕೈಕೊಂಡಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಅಲ್ಲಿಂದ ಬಂದು ೩–೪ ದಿವಸ ಆಗಿದೆ. ಇಷ್ಟರಲ್ಲಿ ಅದು ಕಸದಬುಟ್ಟಿಗೆ ಹೋಗಿದೆ ಎಂದು ತಾವು ಹೇಗೆ ಹೇಳುತ್ತೀರಿ? ನಾವು ಅವನ್ನೆಲ್ಲಾ ನೋಡಿ ಪರಿಶೀಲನೆ ಮಾಡುತ್ತೇವೆ. ತಾವು ಸ್ವಲ್ಪ ಅಲ್ಲಿಯವರೆಗೆ ತಡೆದುಕೊಳ್ಳಿ.

ಶ್ರೀ ಎ. ರಾಮಚಂದ್ರ.—ಇಂತಹ ಎಷ್ಟೋ ಮನವಿಗಳನ್ನು ಅವರು ಕೊಟ್ಟಿದ್ದಾರೆ. ಅದನ್ನು ತಾವು ಪರಿಶೀಲನೆ ಮಾಡಬೇಕು. ಅಲ್ಲಿ ಬಡವರ ರಕ್ಷಣೆಯನ್ನು ಮಾಡುತ್ತೇವೆಂದು ಹೇಳಿ ತಾವು ಇಲ್ಲಿ ಈ ಒಂದು ತಿದ್ದುಪಡಿ ಮಸೂದೆಯನ್ನು ತಂದಿದ್ದೀರಿ. ತಾವಾದರೂ ಈ ಕೆಲಸವನ್ನು ಆದಷ್ಟು ಜಾಗ್ರತೆಯಾಗಿ ಮಾಡಬೇಕು ಎಂದು ಹೇಳುತ್ತೇನೆ. ಅಲ್ಲಿ ಹರಿಜನರ ಕಾಲೋನಿಯಲ್ಲಿ ಎಷ್ಟು ಜನ ಹರಿಜನರು ದಣಿಗಳ ಒಕ್ಕಲಾಗಿದ್ದಾರೆ ಎನ್ನುವ ಬಗ್ಗೆ ನಾನು ತಮಗೆ ಲೆಕ್ಕ ಬೇಕಾದರೆ ಕೊಡುತ್ತೇನೆ. ಅವರಿಗೆ ಅಲ್ಲಿ ರಕ್ಷಣೆ ಇಲ್ಲದೇ ಇರುವುದರಿಂದ ಅವರಿಗೆ ತಾವು ಸಂಪೂರ್ಣ ರಕ್ಷಣೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅವರಿಗೆ ಬರೀ ಸ್ಥಳ ಮಾತ್ರ ಕೊಟ್ಟರೆ ಸಾಕಾಗುವುದಿಲ್ಲ. ಸ್ಥಳದ ಜೊತೆಗೆ ಎಲ್ಲಾ ವಿಧದಲ್ಲೂ ರಕ್ಷಣೆಯನ್ನು ಸಹ ಕೊಡಬೇಕು. ಇನ್ನು ನಮ್ಮ ಮಂಗಳೂರು ಪುರಸಭೆಯಲ್ಲಿ ಇನ್ನೊಂದು ಕಾನೂನು ಇದೆ. ಅದರಂತೆ ಪುರಸಭೆಯಲ್ಲಿರತಕ್ಕಂಥ ಹಣದಲ್ಲಿ ೧೫ ಪರ್ಸೆಂಟ್ ಹಣವನ್ನು ಹರಿಜನರು ಮನೆ ಕಟ್ಟಿಕೊಳ್ಳುವುದಕ್ಕೆ ೧೦೦೦೦ ರೂಪಾಯಿಗಳ ಪ್ರಕಾರ ಕೊಡಬೇಕೆಂದು ಮುನಿಸಿಪಾಲಿಟಿಯವರು ತೀರ್ಮಾನ ಮಾಡಿದ್ದಾರೆ. ಇದು ಅವರಿಗೆ ಸಾಕಾಗುವುದಿಲ್ಲ. ಇದು ಏತಕ್ಕೆ ಸಾಕಾಗುವುದಿಲ್ಲವೆಂದರೆ, ಅವರು ಇರತಕ್ಕಂಥ ಸ್ಥಳದ ಬಗ್ಗೆ ಪಟ್ಟಾ ಆಗಿಲ್ಲ, ಸ್ಥಳದ ಹಕ್ಕು ಅವರಿಗೆ ಇಲ್ಲವಾಗಿದೆ. ಆದ್ದರಿಂದ ಈ ಕಾನೂನನ್ನು ತಾವು ಆದಷ್ಟು ಬೇಗ ಜಾರಿಗೆ ತಂದು ದಣಿಗಳ ಒಕ್ಕಲಾಗಿರುವ ಎಲ್ಲಾ ಹರಿಜನ ಕೂಲಿಗಾರರಿಗೂ ೧೦೦೦೦ ರೂಪಾಯಿಗಳಿಗಿಂತ ಹೆಚ್ಚು ಹಣ ಸಿಕ್ಕುವ ಹಾಗೆ ತಾವು ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮಲ್ಲಿ ಅತ್ಯಂತ ಕಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗಾಗಲೇ ನಮ್ಮ ಸ್ನೇಹಿತರಾದ ಮಾನ್ಯ ಶೀರ್ನಾಳಿ ಚಂದ್ರಶೇಖರ್‌ರವರು ಹೇಳಿದಹಾಗೆ ಈ ಭೂನ್ಯಾಯ ಮಂಡಳಿಗೆ ಸಂಬಂಧಪಟ್ಟ ಹಾಗೆ ಒಂದು ಕಾನೂನನ್ನು ತಂದಿದ್ದೀರಿ ಎಂದು ಕಾಣುತ್ತದೆ. ಭೂನ್ಯಾಯ ಮಂಡಲಿಯಲ್ಲಿರತಕ್ಕಂಥ ಸದಸ್ಯರು ೩ ಸಭೆಗಳಿಗೆ ಹಾಜರಾಗದೇ ಹೋದಲ್ಲಿ ಅಂತಹವರ ಸದಸ್ಯತ್ವ ರದ್ದಾಗುತ್ತದೆ ಎಂದು ತಾವು ಕಾನೂನು ಮಾಡಿದ್ದೀರಿ. ಇದರಲ್ಲಿ ಶಾಸಕರಿಗೆ ಮತ್ತು ಇತರ ಸದಸ್ಯರುಗಳಿಗೆ ಕಾರಣಾಂತರಗಳಿಂದ ಅವರು ೩ ಸಭೆಗೆ ಬರದಿದ್ದರೆ, ಅವರ ಸದಸ್ಯತ್ವವನ್ನು ರದ್ದು ಮಾಡಿದರೆ ಆಗ ಭೂಮಿಗೆ ಸಂಬಂಧಪಟ್ಟಂಥ ಕೆಲವಾರು ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಅಲ್ಲಿಗೆ ಹೊಸ ಸದಸ್ಯರು ಬರುವುದಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ಇದನ್ನು ತಾವು ಕೈಬಿಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಈಗಾಗಲೇ ತಾವು ಬಹಳ ಜನ ಬಡವರಿಗೆ ಭೂಮಿಯನ್ನು ಕೊಡುತ್ತೇವೆ ಎಂಬುದಾಗಿ ಘೋಷಣೆ ಮಾಡಿದ್ದೀರಿ. ಈ ಬಗ್ಗೆ ತಾವು ಅನೇಕ ತೀರ್ಮಾನಗಳನ್ನು ತೆಗೆದುಕೊಂಡಿದ್ದೀರಿ. ಆದರೆ ಇಷ್ಟರವರೆಗೆ ಹರಿಜನ ಕೂಲಿಗಾರರಿಗೆ, ತಾವು ಒಂದು ಇಂಚು ಭೂಮಿಯನ್ನೂ ಕೊಟ್ಟ ಹಾಗೆ ನನಗೆ ಕಾಣುವುದಿಲ್ಲ. ತಾವು ಅವರಿಗೆ ಭೂಮಿಯನ್ನು ಏತಕ್ಕೆ ಕೊಟ್ಟಿಲ್ಲ ಎಂಬುದರ ಬಗ್ಗೆ ತಮ್ಮ ಉತ್ತರದಲ್ಲಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಈ ಭೂ ಸುಧಾರಣಾ ಕಾನೂನಿನಲ್ಲಿ ಏನು ಹೇಳಿದ್ದೀರಿ ಎಂದರೆ, ಧಣಿಗಳಿಂದ ಪಡೆದುಕೊಂಡಂಥ ಜಮೀನುಗಳಲ್ಲಿ ಅರ್ಧಾಂಶ ಅಂದರೆ, ೫೦ ಪರ್ಸೆಂಟ್ ಭೂಮಿಯನ್ನು ಹರಿಜನರಿಗೆ ಕಾದಿರಿಸಬೇಕು ಎಂದು ತಾವು ಈ ಕಾನೂನಿನಲ್ಲಿ ಹೇಳಿದ್ದೀರಿ. ಆದರೆ ಈ ಕಾನೂನಿನ ಪ್ರಕಾರ ಈತನಕ ಅವರಿಗೆ ಭೂ ಹಂಚಿಕೆ ಮಾಡಿರುವುದು ಕಂಡುಬರುವುದಿಲ್ಲ. ಆದ್ದರಿಂದ ಈ ಒಂದು ಕೆಲಸವನ್ನು ತಾವು ಅತೀ ಶೀಘ್ರವಾಗಿ ಮಾಡಬೇಕೆಂದು ತಮ್ಮಲ್ಲಿ ನಾನು ಪ್ರಾರ್ಥಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† SRI V.V. PATTAR (Jamakhandi).—Medam Deputy Speaker, I must profusely thank the Hon'ble Minister for Revenue for having brought this legislation before this House which specifically provides for giving facilities like housing to the agricultural labourers. He has made in his solemn statement that he is bringing this legislation for the benefit of this unfortunate class i.e., land-less labourers. He wanted to ensure guarantee of employment, also. In our State, there are nearly about 27,70,537 agricultural labourers, So, most of these

people who are residing in the agricultural lands belonging to the agricultural land-lords are going to be benefited by this legislation. Therefore, I must thank the Hon'ble Minister for Revenue for the good work done to ameliorate the conditions of this unfortunate class of people.

Then, my hon'ble Friend of this House, Sri Shreenaly Chandrashekar has stated that extension of time will bring many bad things, and it will not be beneficial to the social set up as a whole. He further stated that many stray cases are coming but I would like to specifically bring to the notice of this House that a new class of tenants are created under the Amendment Act. Therefore, if there are new tenants, they have to be provided with an opportunity of making an application for getting themselves registered as occupants. Therefore, there is a necessity for the extension of time. Further, I would like to mention here that many of the land-lords in some parts of the State have not allowed the poor tenants to file their applications Therefore, from that point of view also, extension of time is a fundamental necessity while making this amendment Act. So, I strongly support the extension of time brought by this Amendment Act.

Then the hon'ble Member Smt, Pramila has made out a point that there is discrimination between sons and daughters etc., but that is not the case. Most of the hon'ble Members are aware that the son has a right to property as soon as he attains the majority or even prior to *i.e.*, during the minority but that is not the case with the daughters. Now by bringing this particular wording here, a favour has been done to the unmarried daughters, whether they may be minors or majors they should be treated as the members of the family. That is existing in our personal law, This particular defination is not the definiation given by the State Government but as far as I know, this definition is imposed by the Planning Commission while giving the definition of the Family for the purpose of ceiling. Therefore this wording "Unmarried daughters" is put not for the purpose of making any distinction or discrimination between a son or a daughter but with a view to see that the unmarried daughters are treated as members of the family and there by giving security to the unmarried daughters. That is the main purpose. Therefore, from this point of view also, there is no discrimination at all. The hon'ble Member has also raised some doubts in regard to permanent and ordinary and tenants. Sofar as I know, the permanent tenants are to be treated separately because the definition of the permanent tenant is not given in this book. The rights of the permanent tenants are co-extensive with the adoptive land-lords. They are practically land-lords and their rights cannot be terminated.

That is the low. Therefore, once again, I would like to say that sofar as permanent tenancy is concerned, their rights are practically that of the land-lord. They are practically the owners of the property. Therefore there is no question of doing any undue thing. There is no water in the argument of the hon'ble Member sofar as this aspect is concerned.

Then, Madam Deputy Speaker, I would like to make some suggestions for the consideratian of the Hon'ble Minister. There are tenants who are dispossessed on the date of the operation of the previous Amendment Act i.e., 1-3-1974. These persons were dispossessed from the lands and they have filed the applications under Section 41 of the Act but uptill now, not a single case has been decided. Unless they are put in possession of the property, we cannot register them as occupants of the land inview of Section 45 of the Land Reforms Act. If a tenant is to be registered as an occupant, he must be cultivating the land personally on the date of coming into operation of that Act. The applications filed by them are not at all disposed off by the Tashildars. So, dual authorities are created here. I therefore request the Hon'ble Minister for Revenue to see that the Section is amended suitably to the effect that the powers now given to the Tashildars are entrusted to the Tribunals so that they could decide both the question of paying compensation to the tenants and also to register these persons as occupants of the land.

With these words, I thank the Chair for giving me this opportunity to speak a few words on this progressive piece of legislation and conclude my speech.

MADAM DEPUTY SPEAKER.—Now the House stands adjourned to meet tomorrow at 1 P.M.

*The House adjourned at Six of the Clock to meet again at One of the Clock on Tuesday, the 22nd August 1978.*